ಅಪರಂಜಿ

ಮಾರ್ಚ್
1994
ತಿಳಿನಗೆಯ ಕಾರಂಜ



* ಪ್ರಕಾಶ್
* ಶಿವು
* ಚಿವಿಶ್ರೀ
* ವಿದ್ಯಾ ಪ್ರಸಾದ್
* ಡಾ॥ ಶ್ರೀ ವೆಂಕಟರಮಣ
* ನಂದಿನಿ ಕಾಪಡಿ
* ಎಂ.ಎಸ್.ಕೆ.
* ಎಸ್.ಎಸ್.ಎಸ್.
* ಧೃತಿ
* ಬಿ. ಎಂ. ಜೋಷಿ
* ಶ್ರೀಮತಿ ಅರುಣಾ ಆರ್. ಕಾರಂತ್

ಬಿಡಿ ಪ್ರತಿ : 2 ರೂ. 50 ಪೈ.



ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.

ಶ್ರೀ ಶೇಷಗಿರಿ

ಸಂಪಾದಕ :

ಶಿವಕುಮಾರ್

ಚಂದಾ ವಿವರ :

ಬಿಡಿ ಪ್ರತಿ :

2ರೂ. 50 ಪೈ.

ವಾರ್ಷಿಕ ಚಂದಾ

25 ರೂ.

ಆಜೀವ ಚಂದಾ :

250 ರೂ.

ವಿಳಾಸ :

ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು – 560 003

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೧ | ಮಾರ್ಚ್ ೧೯೯೪ | ಸಂಚಿಕೆ ೬

ತನ್ನ ಧರ್ಮದಲ್ಲಿದ್ದುಕೊಂಡು ನಿಧನಹೊಂದುವುದು. ಪರಧರ್ಮವನ್ನು ಅನುಸರಿಸಿ ಭೋಗ ಜೀವನ ನಡೆಸುವುದಕ್ಕಿಂತ ಮೇಲು ಪರಧರ್ಮದಲ್ಲಿ ನಿಧನಹೊಂದುವುದು ಭಯಂಕರ. —ಗೀತಾ

ನಾವು ಒಳ್ಳೆಯವರು. ನಮ್ಮ ಒಳ್ಳೆತನದಿಂದ ನಮಗೆ ಬಂದುದೇನು ? ಅವರು ನೀತಿನಿಯಮಗಳಿಲ್ಲದೇ ಮಜಪಾಗಿದ್ದಾರಲ್ಲ ಎಂದು ಕೊರಗುವವರು, ಪತ್ರಕ್ಕೆ ಹನ್ನೊಂದು ಜನ.


ತನ್ನ ಕರ್ತವ್ಯವನ್ನು ತತ್ಪರತೆಯಿಂದ ಮಾಡುತ್ತಾ ಉಸಿರೆಳೆಯುವುದೇ ಮೇಲು ಎಂದು ಅರಿತುಕೊಳ್ಳುವವರು ಬಹಳ ಜನರಿಲ್ಲ. ಸ್ವತಃ ಶ್ರೀರಾಮನೇ "ಕರ್ತವ್ಯವನ್ನು ಪಾಲಿಸುವುದರಿಂದ ನಾನು ಕಾಡಿಗೆ ಹೋಗಬೇಕಾಗಿ ಬಂತು. ಹೀಗಾದರೆ ಕರ್ತವ್ಯವನ್ನು ಯಾರೂ ಪಾಲಿಸುವುದಿಲ್ಲ" ಎಂದು ಚಿಂತಿಸಿದನಂತೆ.

ತಮ್ಮ ಭೋಗಜೀವನಕ್ಕಾಗಿ, ಜನತೆಯ ತಲೆಯಮೇಲೆ ಕುಸಿದು ಬೀಳುವಷ್ಟು ಭಾರವನ್ನು ಹೊರಿಸಿದವರಿಗೆ, ಏನು ಸುಖ ಸಿಕ್ಕಿದೆ ? ಜನಗಳು ಹೇಗೂ. ಸುಖವಾಗಿರಲಿಲ್ಲ. ನೆಮ್ಮದಿಯಿಂದ ಸೋದರರಂತೆ ಬಾಳುತ್ತಿದ್ದರು. ಈಗ ಈ ಸಾಲ ಹೇಳುವುದಕ್ಕಾಗಿ ಸಾವಿರಗಟ್ಟಲೆ ಜಾತಿಗಳನ್ನು ಉಪಜಾತಿಗಳನ್ನು ಹೊರಕ್ಕೆಳೆದು ಕಚ್ಚಾಟ ಬಡಿದಾಟ ಆರಂಭವಾಗಿದೆ.

ಮಹಾತ್ಮಾಗಾಂಧೀಜಿಯವರು, ಪಾಪ, ಸ್ವರಾಜ್ಯ ಎಂದು ಹಲುಬಿದರು. ಸ್ವರಾಜ್ಯವೂ ಇಲ್ಲ ಸುರಾಜ್ಯವೂ ಇಲ್ಲ ರಾಜಕೀಯ ಸ್ವಾತಂತ್ರ್ಯವಿದೆ. ಏಕೆಂದರೆ ಇದನ್ನು ಕಸಿದುಕೊಂಡವರಿಗೆ ಕುರುಡು ಕವಡೆಯೂ ಸಿಕ್ಕುವುದಿಲ್ಲ. ವಿಶ್ವ ಆರ್ಥಿಕ ವ್ಯವಸ್ಥೆಯ ಹುಸಿಗನಸಿನಲ್ಲಿ ಇನ್ನೂ ಏನೇನಾಗುವುದೋ ಕಂಡೇ ಅನುಭವಿಸಬೇಕು. ಸಮಾಜವಾದೀ, ಸಾರ್ವಜನಿಕ ಅರ್ಥವ್ಯವಸ್ಥೆಯ ಸುಖವನ್ನು ಎರಡೂ ಕೈಗಳಿಂದ ಸುರಿದುತಿಂದ ಸುಖ ಇನ್ನೂ ಹಚ್ಚಹಸುರಾಗಿಯೇ ಉಳಿದಿದೆ ಕಾಡುತ್ತಿದೆ.

ಒಂದು ಖುಷಿಯ ಸಂಗತಿಯೆಂದರೆ, ಸಂಸ್ಕೃತಿ ಎಂದರೇನು ಎಂಬ ಅನುಮಾನ ಹಲವರಿಗಿತ್ತು. ಈಗ ಆ ಸಂಶಯವಿಲ್ಲ. ನಾಟಕ (ಬ್ರೆಕ್ಟ್, ಸಾರ್ತೆ, ಬಾದಲ್ ಸರ್ಕಾರ್ ಮೊದಲಾದ ಕನ್ನಡಿಗರ ಕೃತಿಗಳು) ನೃತ್ಯ (ಹಲವುಹನ್ನೊಂದು ಕುಣಿತಗಳು ಈಗ ಜನಪದದಲ್ಲಿ ನಶಿಸಿವೆ. ನೂತನ ಜಾನಪದದ ಅಂಗೈಗೆ ಬಂದು ಕಣಿಯುತಿವೆ) ಇತ್ಯಾದಿ ಎಂದು ತಿಳಿಯಿತು.

ಪರದೇಶಕ್ಕೆ ಹೋಗಿ ಬಂದರೇ ಮಹಾಮಜಾ ಸಿಗುತ್ತದೆ. ಇಲ್ಲಿನ ಜನ ! ಇವರಿಗೇನು ಗೊತ್ತು. ನಾವು ಕೊಟ್ಟದ್ದೇ ಬಂಗಾರ. ಶ್ರೀಕೃಷ್ಣ ಹೇಳುವುದು ನಿಜವಾದರೆ, ಇಂದು ಆಗುತ್ತಿರುವುದೇನು ? ಅಪರಂಜಿ, ತಲೆಕೊಡವಿ ನಗುತ್ತಾಳೆ.



ಪ್ರಕಾಶ್

ಪೋಲೀಸರಿಗೆ ಸೌಜನ್ಯದ ತರಬೇತಿ

– ರಾಮಲಿಂಗಂ ಭರವಸೆ

ಇದೂ ರಾಜಕೀಯ ಆಶ್ವಾಸನೆಯಂತಿದೆ !

*　　*　　*

ಸತ್ರವಳ ಹೆಸರಿನಲ್ಲೇ ಉಳಿದ ಕಂದಾಯ ಖಾತೆಗಳ ವರ್ಗಾವಣೆ ಸೂಚನೆ

–ಪತ್ರಿಕೆ

ಎಲ್ಲಿಗೆ ? ?

*　　*　　*

ಪೆಪ್ಸಿಕೋಲಾ ಬಾಟಲ್ ಒಡೆದು, ಡಂಕೆಲ್‌ಗೆ ಧಿಕ್ಕಾರ

–ಸುದ್ದಿ

ಕುಡಿದ ಮೇಲೋ ? ?

*　　*　　*

ನಿರ್ಣಾಯಕ ಹಂತದಲ್ಲಿ ಭಾರತದ ಅರ್ಥವ್ಯವಸ್ಥೆ

–ರಾವ್

ಯಾಕೋ ಭಯವಾಗುತ್ತೆ ! ?

ಆಟೋ ಚಾಲಕರಿಗೆ ಸಮೂಹ ವಿಮೆ

-ಸುದ್ದಿ

ಪ್ರಯಾಣಿಕರಿಗೆ ? ?

* * *

'ರಾಜ್ಯಪಾಲರ ಭಾಷಣ ಹಸಿಸುಳ್ಳಿನ ಕಂತೆ'

–ಶ್ರೀ ರಾ. ಹೆಗಡೆ

ಹೌದು, ಪಕ್ವವಾದ ಸುಳ್ಳುಗಳೇ ವಾಸಿ ! !

* * *

ರಾಜಕೀಯ ವಿಜ್ಞಾನವೇ ನನ್ನ ಮೆಚ್ಚಿನ ವಿಷಯ

–ಭಾರತ ಸುಂದರಿ ಸುಶ್ಮಿತಾ

ಪಾಪ ! ! ಬ್ಯೂಟಿ ಅಂಡ್ ದಿ ಬೀಸ್ಟ್ !

* * *

ಹೊಳೆಯುವ ಕ್ರಿಕೆಟ್ ಚೆಂಡಿನಲ್ಲೇ ಬ್ರಹ್ಮಾಂಡವನ್ನು ಕಂಡ ಯೋಗಿ–ಕಪಿಲರಿಗೆ ಅಪರಂಜಿಯ ಅಭಿನಂದನೆಗಳು ! !

* * *

ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

–ಸುದ್ದಿ

ಅಲ್ಲಾದರೂ ಕಪಿ ಪ್ರಕರಣಗಳು ನಡೆಯದಿರಲಿ !

* * *

5

ಒಂದು ಮುಖಾಮುಖಿ

ಶಿವ

"ಶಿವರಾಮ ಕಾರಂತರು ಹೇಗಿದ್ದಾರೆ ? ಬಿ. ವಿ. ಕಾರಂತರು ಇತ್ತೀಚೆಗೆ ಏನಾದರೂ ಹೊಸ ಸಂಗೀತ ಸಂಯೋಜನೆ ಮಾಡಿದ್ದಾರೇನು ? "ನಿಭಾ ಜೋಷಿ ಕೇಳಿದರು.

ನಿಭಾ, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಮಾಜೀ ಪ್ರಾಧ್ಯಾಪಕಿ. ಬೊಂಬಾಯಿನ ಅಂಧೇರಿಯಲ್ಲಿ ತನ್ನ ಅಕ್ಕನ ಮಗಳು ಶೋಭನಾಳ ಮನೆಯಲ್ಲಿ ತಂಗಿದ್ದರು. ಶೋಭನಾಳ ಪತಿ ರಾಜು ನನ್ನ ಬಿಸಿನೆಸ್ ಕೊಲೀಗ್. ಆ ಸಂಜೆ ರಾಜು ನನ್ನನ್ನ ಅವರ ಮನೆಗೆ ಊಟಕ್ಕೆ ಕರೆದಿದ್ದ. ನಾನು ತಂಗಿದ್ದ ಹೋಟಲಿನಿಂದ ಅವರ ಮನೆಗೆ ಕೇವಲ ಹತ್ತು ಕಿಲೋಮೀಟರ್ ದೂರ. ಆದರೆ ಬೊಂಬಾಯಿನ ಇಂದಿನ ಸಾರಿಗೆ ಸ್ಥಿತಿಯಲ್ಲಿ ಆ ದೂರ ಕ್ರಮಿಸಬೇಕಾದರೆ ಹನುಮಂತ ಲಂಕೆಗೆ ಹಾರಿದಷ್ಟು ಪ್ರಯಾಸ ನಾನು ಆರೂವರೆಗೆ ಹೊರಟು, ಮರೋಳ್‌ನಾಕ, ಸಾಕಿನಾಕ, ಎಂಬ ಎರಡು ಮಹಾನ್ ಸಾರಿಗೆ ಕಗ್ಗಂಟುಗಳಲ್ಲಿ ಅರ್ಧರ್ಧ ಘಂಟೆ ಕಾದು ಬಸವನ ಹುಳುವಿನಂತೆ ಮುಂದೆ ಸಾಗಿ ಅವರ ಮನೆ ಸೇರಿದಾಗ ರಾತ್ರಿ ಎಂಟು ಘಂಟೆಯಾಗಿತ್ತು. ಬಾಗಿಲಲ್ಲೇ ಶೋಭನಾ ನನ್ನನ್ನು ನಗುಮುಖದಿಂದ ಸ್ವಾಗತಿಸಿದಳು. ಕೈಯಲ್ಲಿ ತಂದಿದ್ದ ಪುಷ್ಪಗುಚ್ಛವನ್ನು ಅತಿಥೇಯಿನಿಗೆ ಕೊಟ್ಟು ನಾನು ಒಳಕ್ಕೆ ಹೋಗಿ ಸೋಫಾದ ಮೇಲೆ ಕುಳಿತೆ. "ರಾಜು ಈಗಲೇ ಬರ್ತ್ತಾನೆ. ಕೂತಿರಿ. ಒಂದ್ನಿಮಿಷ ಬಹು ಸುಂದರ ಗುಲಾಬಿಗಳು. ಇವನ್ನ ನೀರಿನಲ್ಲಿಟ್ಟು ಬರ್‍ತೀನಿ" ಅಂತ ಹೇಳಿ ಶೊಭನ ಒಳಕ್ಕೆ ನಡೆದಳು. ಯಾವುದೋ ಒಂದು ಅತೀಂದ್ರಿಯ ಪ್ರಜ್ಞೆ ನನ್ನನ್ನು ಎಚ್ಚರಿಸಿತು. ಪಕ್ಕದ ಸೋಫಾಕಡೆ ತಿರುಗಿದೆ. ಒಂದು ಚೆನ್ನಾಗಿ ಬೆಳೆದ ಕರುವಿನಷ್ಟಿದ್ದ ಅಲ್ಸೇಷನ್ ಅದರ ಮೇಲೆ ಕೂತು ತದೇಕ ದೃಷ್ಟಿಯಿಂದ ನನ್ನನ್ನೇ ನೋಡುತ್ತಿತ್ತು. ಅದರ ದೃಷ್ಟಿಯಲ್ಲಿ ಯಾವುದೇ ವಿಧವಾದ ಮಧುರ ಭಾವನೆಗಳೂ ಇದ್ದಂತಿರ ಲಿಲ್ಲ. ಬಹುಶಃ ಬೇನಜೀರ್ ಭುಟ್ಟೊ ತನ್ನ ತಾಯಿಯನ್ನು ನೋಡಲು ಮೀಸಲಿ ಟ್ಟದ್ದ ದೃಷ್ಟಿಯಂತಿತ್ತು. ಆ ಶ್ವಾನದೃಷ್ಟಿ ನನಗೆ ನಾಯಿಗಳೆಂದರೆ ಅಷ್ಟೇನೂ ಪ್ರೇಮವಿಲ್ಲ. ಆ ವಿಷಯ ಆ ನಾಯಿಗೂ ತಿಳಿದಿದ್ದ ಹಾಗೆ ಕಾಣಿಸಿತು. ನಮ್ಮಿಬ್ಬರ ಮಧ್ಯೆ ಈ ಶೀತಲ ಸಮರ ನಡೆಯುತ್ತಿದ್ದಂತೆ, ಒಳಕೋಣೆಯ ಬಾಗಿಲು ತೆರೆಯಿತು. ರಾಜು ಬಂದನಲ್ಲಾ ಸಧ್ಯ ಅಂತ ತಿರುಗಿ ನೋಡಿದೆ. ಒಬ್ಬ ಹಿರಿಯ ಮಹಿಳೆ ನಡೆದು ಬಂದರು. ಅಷ್ಟೇನೂ ಎತ್ತರವಲ್ಲದ ನಿಲುವು. ಜಾಳು ಜಾಳಾಗಿ

ಕ್ರೋಷಾದಲ್ಲಿ ನೂತಿದ್ದ ಹತ್ತಿಯ ಶಾಲೊಂದು ಭುಜಗಳ ಮೇಲಿತ್ತು. ಕಣ್ಣಿಗೆ ಗಾಂಧಿ ಕನ್ನಡಕ, ಹೊಳೆಯುವ ಕಣ್ಣುಗಳು. ಮುಖದಲ್ಲಿ ಬೆಚ್ಚನೆಯ ಮುಗುಳುನಗೆ. ಒಂದೆಯೇ ಬಂದ ಶೋಭನಾ.

"ಇವರು ನನ್ನ ಮೌಸಿ ನಿಭಾಜೋಷಿ. ಇವರು ಶಿವಕುಮಾರ್ ಕೈಗಾರಿ ಕೋದ್ಯಮಿ ಬೆಂಗಳೂರಿನಿಂದ ಬಂದಿದ್ದಾರೆ ರಾಜು ಇವರ ಯಂತ್ರಗಳ ಮಾರಾಟಕ್ಕೆ ಸಹಾಯ ಮಾಡ್ತಾನೆ." ಎಂದು ನಮ್ಮಿಬ್ಬರನ್ನು ಪರಿಚಯಿಸಿ "ಜಿಂಜರ್ ಈ ಕಡೆ ಇಳಿದು ಬಾ" ಅಂತ ನಾಯಿಗೆ ಆಜ್ಞೆಯಿತ್ತಳು. ಜಿಂಜರ್ ಅತ್ಯಂತ ವಿಧೇಯತೆ ಯಿಂದ ಸೋಫಾಬಿಟ್ಟು ಮೂಲೆಗೆ ಹೋಯಿತು. ನಾನು ನಿಭಾರವರಿಗೆ ನಮಸ್ಕ ರಿಸಿ ಕೂತ ನಂತರ ಅವರು ಮಾತು ಕತೆ ಪ್ರಾರಂಭಿಸಿದರು.

"ಶಿವರಾಮ ಕಾರಂತರು ಚೆನ್ನಾಗಿದ್ದಾರೆ. ಈಗಲೂ ಬಹಳ ಚಟುವಟಿಕೆ ಯಿಂದ ಇದ್ದಾರೆ. ನಮ್ಮ ಪತ್ರಿಕೆ ಅವರಂಜಿಗೂ ಆಗಾಗ್ಗೆ ಕವನಗಳನ್ನು ಕಳಿಸ್ತಾ ಇರ್ತಾರೆ. ಕಳೆದ ತಿಂಗಳು ಬೆಂಗಳೂರಿನಲ್ಲಿ ನೀನಾಸಂ ತಂಡದವರು ನಡೆಸಿಕೊಟ್ಟ "ಗೋಕುಲ ನಿರ್ಗಮನ" ಗೀತನಾಟಕಕ್ಕೆ ಬಿ. ವಿ. ಕಾರಂತರೇ ಸಂಗೀತ ಸಂಯೋಜನೆ ಮಾಡಿದ್ದರು. ಬಹಳ ಚೆನ್ನಾಗಿ ಮೂಡಿ ಬಂದಿತ್ತು ನಾಟಕ" ಅಂದೆ.

"ಹೆಗ್ಗೋಡಿನ ಸುಬ್ಬಣನವರನ್ನು ನಾನು ಚೆನ್ನಾಗಿ ಬಲ್ಲೆ. ದೆಹಲಿಗೆ ಬಂದಾಗ ಅನೇಕ ಬಾರಿ ಅವರೊಡನೆ ಉಪಯುಕ್ತ ವಿಚಾರ ವಿನಿಮಯ ನಡೆಸಿದ್ದೇನೆ. ಅಂದ ಹಾಗೆ, ಶೋಭನಾ ಈ ದಕ್ಷಿಣ ಭಾರತದವರ ಸಂಸ್ಕೃತಿನೇ ಬೇರೇ ತರಹ. ಅಲ್ಲಿ ಮಾತು ಮಾತಿಗೂ ಯಾವುದಾದರೂ ಪುರಾಣದ ಪ್ರಸಂಗಗಳನ್ನೋ ಗಾದೆಗಳನ್ನೋ ಉಲ್ಲೇಖಿ ಸುತ್ತಾನೇ ಇರ್ತಾರೆ. ನಮ್ಮ ಉತ್ತರ ಭಾರತದ ಸಾಮಾನ್ಯ ಜನಕ್ಕೆ ಇಂತಹ ಉತ್ತಮ ಸಂಸ್ಕೃತಿ ಇಲ್ಲ. ನಿಮಗೇನನ್ನಿಸುತ್ತೆ ? "ಅಂತ ನನ್ನ ಕೇಳಿದರು.

ಅಷ್ಟರಲ್ಲಿ ಹೊರಬಾಗಿಲ ಕರೆಗಂಟೆ ಸಂಗೀತ ಹಾಡಿತು. ಶೋಭನಾ ಬಾಗಿಲು ತೆರೆಯುತ್ತಿದ್ದಂತೆ, ರಾಜು ಒಳಕ್ಕೆ ಬಂದ. ಒಲಗೈನಲ್ಲಿ ಬೀರು ಬಾಟಲುಗಳು ತುಂಬಿದ್ದ ಒಂದು ಚೀಲ. ಎಡಗೈನಲ್ಲಿ ಇನ್ನೊಂದು ಸಣ್ಣ ಚೀಲ. ಖಾರ ಇರಬೇಕು ಅಂದುಕೊಂಡೆ. ಜಿಂಜರ್ ಒಂದೆರಡು ಬಾರಿ ಅವನ ಸುತ್ತ ಎಗರಾಡಿ ಸುಮ್ಮ ನಾಯಿತು.

"ಸಾರಿ ಕಣಯ್ಯ ಲೇಟಾಯ್ತು ಮಾತಾಡ್ತಾ ಇರು. ಈಗಲೇ ಬಂದ್ಬಿಟ್ಟೆ ಮೌಸಿ, ಇವರು ದೊಡ್ಡ ದೊಡ್ಡ ಯಂತ್ರಗಳನ್ನ ತಯಾರಿಸ್ತಾರೆ. ವಿಖ್ರೋಲಿನಲ್ಲಿ ನಡೀತಿರೋ ಕೈಗಾರಿಕಾ ಪ್ರದರ್ಶನದಲ್ಲಿ ಇವರ ಸ್ಟಾಲ್ ಇದೆ" ಅಂತ ಹೇಳಿ ಬೀರು ಬಾಟಲುಗಳನ್ನು ಫ್ರಿಜ್‌ನಲ್ಲಿಡಲು ಒಳಕ್ಕೆ ಹೋದ.

"ನಾನು "Take your time ರಾಜು" ಅಂತ ಹೇಳಿ ಡ್ರಾಮಾಸ್ಕೂಲ್ ಪ್ರೊಫೆಸರ್ ಮುಂದೆ ನನ್ನ ಪ್ರತಿಭೆ ತೋರಿಸ್ಕೊಳ್ಳೊಕ್ಕೆ ಬೆಂಗಳೂರಿನ ಥಿಯೇಟರ್ ಸೀನ್‌ನ ಬಗ್ಗೆ ಒಂದು ಭಾಷಣ ಕೊರೆದೆ. ಸಿ. ಆರ್. ಸಿಂಹ ಹೊಸದಾಗಿ "ರಸಋಷಿ" ಸೃಷ್ಟಿಸಿರೋದು ಕೀರ್ತಿನಾಥರ "ಸ್ವಪ್ನನಾಟಕ" ಗಿರೀಶಕಾರ್ನಾಡರ ತುಘಲಕ್. ತಲೆದಂಡ ಹಯವದನ, ನಾಗಮಂಡಲ, ಗೊತ್ತಿದ್ದು ಗೊತ್ತಿಲ್ಲದ್ದು ಎಲ್ಲಾ ಸೇರಿಸಿ ವಾಗ್ಧಾರೆ ಹರಿಸಿದೆ. ನಿಭಾ ಬಹು ಆಸಕ್ತಿಯಿಂದ ಎಲ್ಲವನ್ನೂ ಕೇಳಿಸಿಕೊಂಡರು.

"ಹೌ ಇಂಟರೆಸ್ಟಿಂಗ್! ನಿಮಗೆ ನಾಟಕ ಮಾಧ್ಯಮ ಬಹಳ ಇಷ್ಟ ಅಂತ ಕಾಣುತ್ತೆ ಮೊನ್ನೆ ನಸೀರ್ ಬಂದಿದ್ದ. ಯಾವುದೋ ಆಧುನಿಕ ನಾಟಕಕ್ಕೆ ಕೊರಿಯಾಗ್ರಫಿ ನಿರ್ದೇಶನಮಾಡಿ ಅಂತ ವಿನಂತಿಸಿಕೊಂಡ. ಅದರಲ್ಲಿ ಕಾರ್ಖಾನೆ ಪರಿಸರ ಬರುತ್ತೆ. ಆ ಬಗ್ಗೆ ಸ್ವಲ್ಪ ವಿವರ ಹೇಳ್ತಿರಾ ? ನಿಭಾ ಕೇಳಿದರು.

ನಸೀರ್ ? ಯಾರಿದು ನಸೀರ್ ? ಹ್ಞಾ ಟ್ಯೂಬ್‌ಲೈಟ್ ಹತ್ತಿತ್ತು. ನಸೀರುದ್ದೀನ್ ಷಾ ! ಅಯ್ಯೋ ದೇವರೆ, ನಾನೇಕೆ ಈಕೆ ಮುಂದೆ ಏನೇನೋ ಕೊಚ್ಚಿಕೊಳ್ಳೊದಕ್ಕೆ ಹೋದೆ. ಉಡಾಫೆ ಮನುಷ್ಯ ಅಂದ್ಕೊಂಡಿರ್‍ತಾರೊ ಏನೋ ಅಂತೆಲ್ಲಾ ಚಿಂತೆಗಳು ಮುತ್ತಿದವು. "ನನ್ನದೇನೂ ಅಂಥಾ ದೊಡ್ಡ ಕೈಗಾರಿಕೆಯೇನಲ್ಲ ನಿಭಾರವರೇ ಒಂದು ಸಣ್ಣ ಉದ್ದಿಮೆ ಅಷ್ಟೆ. ಹೊಟ್ಟೆಪಾಡಿಗೆ ಏನಾದರೂ ಮಾರ್ಗ ಬೇಕಲ್ಲ. ಅದರಲ್ಲಿ ವಿವರಿಸೋದೇನಿದೆ ? ನೀವು ಕೊರಿಯಾಗ್ರಫಿ ಪರಿಣಿತರು. ಕೊರಿಯಾಗ್ರಫಿ ನಿರ್ದೇಶನ ಹೇಗೆ ಮಾಡ್ತಿರ ಹೇಳಿ" ಅಂತ ಕೇಳಿದೆ.

"ಮೊನ್ನೆ ನಾನು ಬಾಂದ್ರಾಗೆ ಹೋಗಬೇಕಾಯ್ತು. ರಾಜು ನನ್ನ ಕರ್ಕೊಂಡು ಹೋಗ್ತೀನಿ ಅಂತ ಹೇಳಿದ್ದ. ಬೆಳಿಗ್ಗೆ ಅವನು ಕಾರು ಸ್ಟಾರ್ಟ್ ಮಾಡಿದಾಗ ಎಂದಿನಂತೆ ಬುರ್ರ್ ಅಂತ ಸದ್ದು ಬರಲಿಲ್ಲ. ಇಂಜನ್ನು ಯಾವುದೊ ನೋವಿನಿಂದ ಬಳಲುತ್ತಾ ಕೆಮ್ಮುತ್ತಿದ್ದಂತೆ ತೋರಿತು. ರಾಜು ಕಾರಿಗೇನಾಗಿದೆ? ಅಂತ ಕೇಳಿದೆ. ಆದಕ್ಕೆ ಅವನು "ಇಂಜಿನ್ನು ಮಿಸ್ ಆಗ್ತಾ ಇದೆ ಅತ್ತೆ, ಸ್ಪಾರ್ಕ್‌ಪ್ಲಗ್ ತೆಗೆದು ಕ್ಲೀನ್ ಮಾಡಿದ್ರೆ ಎಲ್ಲಾ ಸರಿಹೋಗಂತ್ರೆ" ಅಂದ ಕ್ಲೀನ್ ಮಾಡಿ ಸ್ಟಾರ್ಟ್ ಮಾಡಿದಾಗ ಇಂಜನ್ನು ಆರೋಗ್ಯಕರವಾಗಿ ಬುರ್ರ್‌ಅಂತ ಹಾಡುಕ್ಕೆ ಶುರುಮಾಡ್ತು. ರಾಜು ಆಗ ಕಾರಿನ ಬಾನೆಟ್ ತೆಗೆದಿದ್ದ. ಫ್ಯಾನ್ ಗಿರ್ರ್‌ಂತ ಅಡೆ ತಡೆಯಿಲ್ಲದೇ ಸಂತಸದಿಂದ ತಿರುಗುತ್ತಿತ್ತು. ಕ್ಯಾಮ್‌ಷಾಫ್ಟ್‌ನ ಭಾಗಗಳು ತಾಳಲಯ ಬದ್ಧವಾಗಿ ಕುಣಿಯುತ್ತಿದ್ದವು. ಒಂದು ಅಪಶ್ರುತಿ ಇರಲಿಲ್ಲ. ಕೊರಿಯಾಗ್ರಫಿ ಕೂಡ ಹಾಗೆ. ಒಂದು

ಡ್ಯಾನ್ಸ್ ಸೀಕ್ವೆನ್ಸ್‌ನ ನೋಡಿದಾಗ ಯಾವುದಾದರೊಂದು ಭಾಗದ ಸಂಗೀತ, ನರ್ತನ, ಕಿವಿಗೆ ಕರ್ಕಶವಾದರೆ, ಕಣ್ಣಿಗೆ ನೋವುಂಟಾಗುವ ಹಾಗಿದ್ದರೆ, ಅದನ್ನು ಮಾತ್ರ ನಾನು ತಿದ್ದುತ್ತೇನೆ. ನಾಲ್ಕಾರು ಬಾರಿ ಹೀಗೆ ತಿದ್ದಿದ ನಂತರ ಆ ಸಮೂಹ ನರ್ತನ ಕಣ್ಣಿಗೆ ಹಿತವಾಗಿರುತ್ತೆ. ಕಿವಿಗೆ ಇಂಪಾಗಿರುತ್ತೆ. ಒದು ರಮ್ಯ ದೃಶ್ಯವಾಗಿ ಮಾರ್ಪಾಡಾಗಿರುತ್ತೆ. ರಾಜುಗೆ ಇಂಜನ್ ಮಿಸ್ಸಿಂಗ್‌ನ ಬಹು ಸೂಕ್ಷ್ಮವಾಗಿ ತಿಳಿಯೋ ಕಿವಿ ಇರೋಹಾಗೆ, ನಮಗೆ ಕೊರಿಯೋಗ್ರಾಫಿಕ್ ಸಂವೇದನೇ ಇರಬೇಕು ಅಷ್ಟೆ" ಅಂದರು ನಿಭಾ.

ರಾಜು ಒಳಕ್ಕೆ ಬಂದ. ಸಿಲ್ಕ್ ಜುಬ್ಬಾ ಕುರ್ತಾ ಧರಿಸಿದ್ದ. ಒಂದೊಂದು ಕೈ ನಲ್ಲೂ ಒಂದೊಂದು ತುಂಬಿದ ಬೀರ್ ಗ್ಲಾಸು. ಅವನ ಹಿಂದೆ ಶೋಭನಾ. ಆಕೆಯು ಬಲಗೈನಲ್ಲಿ ಜೊಡ ತುಂಬಿದ ತಟ್ಟೆ. ಎಡಗೈನಲ್ಲಿ ಈರುಳ್ಳಿ, ಟೊಮೆಟೊ ಸೌತೆಕಾಯಿ ಹಲ್ಲೆಗಳನ್ನು ಪೇರಿಸಿದ್ದ ಬೋಲ್. ಬೊಂಬಾಯಿನ ಆ ಧಗೆಯಲ್ಲಿ ಬಾಯಿ ಒಣಗಿದ್ದ ನನಗೆ ಆ ದಂಪತಿಗಳು ಇಷ್ಟಾರ್ಥಗಳನ್ನು ಈಡೇರಿಸಲು ಪ್ರತ್ಯಕ್ಷರಾದ ಲಕ್ಷ್ಮೀ, ನಾರಾಯಣರಂತೆ ಕಂಡರು.

"ರಾಜು ನೀನು ಬರೋದು ಯಾಕೆ ಲೇಟ್‌ಆಯ್ತು ಹೇಳಲೇಇಲ್ಲ" ಅಂತ ಕೇಳಿದೆ.

"ನಾನೇನು ಹೇಳಲಿ ಮಾರಾಯ, ಆಫೀಸಿನ ಹತ್ತಿರ ಕಾರು ಸ್ಟಾರ್ಟ್ ಆಗಲೇಇಲ್ಲ. ಇಂಜಿನ್‌ಮಿಸ್ ಹೊಡೀತಿದೆಯೇನೋ ಅಂತ ಸ್ಪಾರ್ಕ ಪ್ಲಗ್ ಎಲ್ಲಾ ಕ್ಲೀನ್ ಮಾಡಿನೋಡ್ದೆ. ಉಹು ಜಪ್ಪಯ್ಯ ಅಂದ್ರು ಸ್ಟಾರ್ಟ್ ಆಗಲಿಲ್ಲ. ಕೊನೆಗೆ ಬೀದೀ ಕೊನೇಲಿದ್ದ ಗರಾಜ್ ಹುಡುಗನ್ನ ಕರ್ಕೊಂಡು ಬಂದೆ. ಅವ ಕಾರ್ಬುರೇಟರ್ ಬ್ಲಾಕ್ ಆಗಿದೆ ಅಂತ ಹೇಳಿ ಕ್ಲೀನ್ ಮಾಡಿಕೊಟ್ಟ. ಕಾರು ಸರಿಹೋಯಿತು. ಈ ಕಾರುಗಳ ಸಹವಾಸ ಸಾಕಪ್ಪಾಸಾಕು. ಒಂದು ಸರಿ ಮಾಡಿದ್ರೆ ಇನ್ನೊಂದು ಕೈಕೊಡುತ್ತೆ" ಅಂದ ರಾಜು. ನಿಭಾ ಜೋರಾಗಿ ನಗುಕ್ಕೆ ಶುರುಮಾಡಿದರು. ನಾನೂ ದನಿ ಗೂಡಿಸಿದೆ. ರಾಜು, ಶೋಭನಾ ಅರ್ಥವಾಗದೇ ನಮ್ಮನ್ನ ಮಿಕಿ ಮಿಕಿ ನೋಡಿದರು. ಜಿಂಜರ್ ಆಲೆಗಣ್ಣಿನಿಂದ ಬೀರ್ ತುಂಬಿದ ಗ್ಲಾಸನ್ನೇ ನೋಡುತ್ತಿತು. ನಾನು ರಾಜುವಿನ ಕೈಯಿಂದ ನನ್ನ ಗ್ಲಾಸನ್ನು ಪಡೆದು "ಚೀರ್ಸ್" ಅಂದೆ.

ಜನನಾಯಕ

(ಶ್ರೀ ಪಂಜೆ ಮಂಗೇಶರಾಯರ ಮೂಡುವನು ರವಿ ಮೂಡುವನು ... ...
ಕವಿತೆಯ ಧಾಟಿ)

ಚಿವಿಶ್ರೀ

ಬಂದಿಹನು ವಿಸ* ಬಂದಿಹನು
ನಾಯಕರೊಡನೆ ಜಗಳಾಡಿಹನು
ವಿಧಾನರಂಗಸ್ಥಳದಲಿ ಗಲಭೆಯ
ಮಾಡಿಹನು, ಕಿರಿಚಾಡಿಹನು ॥೧॥

ಕಪ್ಪಿನ ಧನಪತಿಗಳಿಂದಾ ವಿಸನು
ಬಾಚುವನು ಹಣದೋಚುವನು
ನ್ಯಾಯವ ನೀತಿಯ ಧರ್ಮವ ತತ್ತ್ವವ
ದೂಡುವನು ಹೊರದೂಡುವನು ॥೨॥

ಬಂಗಾರದ ಬಲು ಒಡವೆಯ ಮಾಡಿಸಿ
ಶೃಂಗಾರದ ಮನೆ ಕಟ್ಟುವನು
ಬಹುಬೆಲೆಬಾಳುವ ಪರಿಕರದೊಡನೆ
ಮೆರೆಯುವನು, ಉದರವ ಬೆಳೆಸುವನು ॥೩॥

ಚುನಾವಣೆ ಸಮಯದಿ ಜನಗಳ ಮುಂದೆ
ಬಂದಿಹನು, ಮತ ಬೇಡಿಹನು
ನೀವೇ ಪ್ರಭುಗಳು ಎನ್ನುತ ಜನರಿಗೆ
ಬಾಗುವನು, ಮೋಡಿ ಹಾಕುವನು ॥೪॥

ಆಯ್ಕೆಯ ಅನಂತರ ಜನಗಳ ಮನಸನು
ವಂಚಿಪನು, ಸುಳ್ಳಾಡುವನು
ತೊಂದರೆ ಪಡುತಿಹ ಪ್ರಜೆಗಳ ಹಿತವನು
ಮರೆಯುವನು, ದೂರವಮಾಡುವನು ॥೫॥

ಲಂಚದ ಹಣವನು ನೀಡುವ ದುರುಳರೆ
ಪ್ರಭುಗಳು ಎಂದು ನಂಬಿಹನು
ಅವರಲಿ ಇರುತಿಹ ಆಸೆಯ ಸಲಿಸಲು
ಹೊರಡುವನು, ಸಂಭ್ರಮ ತೋರುವನು ॥೬॥

ಮಂತ್ರಿಯ ಪದವಿಯ ಗಳಿಸಲು ಎಂದು
ಆಶಿಪನು ಸಂಚನು ಹೂಡಿಪನು
ಪೋಲಿ ಪಟಿಂಗರ ಗುಂಪನು ಕಟ್ಟಿ
ಮೆರೆಯುವನು ದುರುಳರ ನಾಯಕನು ॥೭॥

ದೇಶದ ಹಿತವನು ಕಾಯಲು ಮರೆತು
ದೇಶಕೆ ಸಂಕಟ ತಂದಿಹನು
ಸಾಲದ ಮಡುವಲಿ ದೇಶವ ಮುಳುಗಿಸಿ
ಅನ್ಯರ ದಾಸ್ಯಕೆ ದೂಡುವನು. ದ್ರೋಹವ ಮಾಡುವನು ॥೮॥

---

* ವಿಸ– ವಿಧಾನ ಸಭಾ ಸದಸ್ಯ

11

ಸರ್ಜನ್ ಪಾಡು

–ವಿದ್ಯಾ ಪ್ರಸಾದ್

ಸರ್ಜನ್ ರಾಯರೆಂದರೆ ನಮ್ಮೂರಿನಲ್ಲೆಲ್ಲ ಹೆಸರುವಾಸಿ. ತಮ್ಮ ಮೆಚ್ಚಿನ ಮಡದಿಯನ್ನು ಹನಿಮೂನಾದ ಮೇಲೆ ವರ್ಷಾನುಕಾಲ ಎಲ್ಲಿಗೂ ಕರಕೊಂಡು ಹೋಗಿರಲಿಲ್ಲ. ಸರ್ಜನರಿಗೋ, ತಾವಾಯಿತು ತಮ್ಮ ಆಸ್ಪತ್ರೆ, ಆಪರೇಷನ್ ಥಿಯೇಟರ್ ಆಯಿತು– ಬೇರೆ ಲೋಕ ಇರಲಿಲ್ಲ. ರಾಯರ ಮಡದಿಗೆ ಹೊಸದರಲ್ಲಿ ಬಹು ಬೇಜಾರಾದರೂ, ಕಾಲ ಕ್ರಮೇಣ ಸಂಸಾರ ಸಾಗರದಲ್ಲಿ ಮುಳುಗಿದ ಪ್ರಯುಕ್ತ, ವಾಸ್ತವಸ್ಥಿತಿಗೇ ಹೊಂದಿಕೊಂಡಿದ್ದರು.

ಅಂದು ಭಾನುವಾರ ದಂಪತಿಗಳ ಮದುವೆಯಾದ ದಿನದ ಬೆಳ್ಳಿ ಹಬ್ಬದ ದಿನ. ಈ ಸಂಗತಿ ಸರ್ಜನರ ಗಮನಕ್ಕೆ ಹಠಾತ್ತನೆ ಬಂದಿದ್ದು ಅತಿ ಸೋಜಿಗದ ಸಂಗತಿ ಆ ದಿನದ ಬಗ್ಗೆ ಮಡದಿಗೇ ಮರೆತು ಹೋಗಿತ್ತು. ಇದ್ದಕ್ಕಿದ ಹಾಗೇ ಸರ್ಜನರು, (ಮನೆಯಲ್ಲಿ ಪುತ್ರ–ಪುತ್ರಿಯರು ಇಲ್ಲದ ಸದವಕಾಶದಲ್ಲಿ) "ಲೇ ! ಇವಳೇ" ಎಂದು ಅವರ ನಯ–ರಹಿತ ಧ್ವನಿಯಲ್ಲಿ ಕೂಗಿದರು. ಪಾಪ! ಆ ಸಹಧರ್ಮಿಣಿ ಏನಾಯಿತೋ ಎಂದು ಧಾವಿಸಿ (ಆದಷ್ಟು ಧಾವಿಸಿ) ಬಂದರು. ರಾಯರು ಅಕ್ಕರೆ ಯಿಂದ ಮಡದಿಯನ್ನು ಸಮೀಪಿಸುತ್ತ, "ಅಲ್ಲ ಕಣೇ ! ಭಾನುವಾರ ಊಟಿಗೆ ಹೋಗೋಣವೇ ?" ಅಂತ ಕೇಳಿದರು. ರಾಯರ ಮಡದಿ ಹಾವನ್ನು ಮೆಟ್ಟಿದ ಹೆಂಗಳೆಯಂತೆ ಹಿಂದಕ್ಕೆ ಹಾರಿದರು ! ರಾವಣನನ್ನು ಕಂಡ ಸೀತಾಮಾತೆಯಂತೆ ಓಡಿ, ಅಡಿಗೆ ಮನೆಯ ರಕ್ಷೆಯನ್ನು ಸೇರಿದರು ! ಬಾಗಿಲು ಭದ್ರಮಾಡಿ ಕಂಪಿಸುತ್ತ ನಿಂತರು. ರಾಯರು ಹೌಹಾರಿ, 'ಯಾಕೇ ?' ಅಂತ ಬಾಗಿಲು ತಟ್ಟಿದರು.

ಒಳಗಿಂದ ಧ್ವನಿ ತೇಲಿಬಂತು. "ಅಲ್ರೀ ! ನಾನು ಕಲ್ಲುಗುಂಡಿನ ಹಾಗಿದೀನಿ ! ನನ್ನನ್ಯಾಕೆ ಓ. ಟಿ. ಗೆ ಕರೀತಿದೀರಾ ? !" ಪರಿಸ್ಥಿತೀನ ಹತೋಟಿಗೆ ತರುಕ್ಕೆ ಸರ್ಜನರು ಆಪರೇಷನ್ ಎಕ್ಸ್‌ಪ್ಲನೇಷನ್‌ನಲ್ಲಿ ತೊಡಗಬೇಕಾಯಿತು. !

ನಗಿ, ನಗುತ್ತಾ ಇರಿ !

ಡಾ॥ ಶ್ರೀ ವೆಂಕಟರಮಣ

ಹರಿಕತೆ ದಾಸರೊಬ್ಬರಿಗೆ ಸಭಿಕರ ಕೊರತೆ ಇತ್ತಂತೆ. ಅವರ ಸಂಖ್ಯೆ 10-12 ದಾಟುವುದೇ ಕಷ್ಟವಾಗಿತ್ತು. ಅದಕ್ಕೊಂದು ಬಾರಿ ಅವರು ಕತೆ ಮುಗಿಯುವ ಹಂತದಲ್ಲಿ, 'ಜನರು ಸಾಯದೆನೇ ಇರಬೇಕಾದರೆ' ಎಂದು ಹೇಳಿ, ನಿಲ್ಲಿಸಿ, 'ಅದನ್ನು ನಾಳೆ ಹೇಳುವೆನೆಂದರು. ಮರುದಿನ ಅವರ ಕತೆಗೆ ಜನಜಂಗುಳಿ. ಅಮರತ್ವದ ಗುಟ್ಟನ್ನು ತಿಳಿದೇ ಬಿಡೋಣವೆಂಬ ಕಾತರ ಎಲ್ಲರದ್ದು ದಾಸರು ಆರಾಮವಾಗಿ ಕತೆ ಹೇಳುತ್ತ ಹೋದರು. ಅವರಲ್ಲಿ ಲವಲವಿಕೆ, ಉತ್ಸಾಹ ತುಂಬಿದ್ದವು. ಸಭಿಕರ ಬರವಿರಲಿಲ್ಲವಲ್ಲ ಈಗ ! ಯಾರೋ ಒಬ್ಬ ಭಕ್ತರು ಜ್ಞಾಪಿಸಿದರು. 'ಅಲ್ಲ ದಾಸರೇ ಸಾಯದೇ ಇರುವ ಗುಟ್ಟನ್ನು ಹೇಳುವೆನೆಂದಿದ್ದಿರಲ್ಲ' ಎಂದರವರು. ಅದಕ್ಕೆ ದಾಸರು, 'ಸಾಯದೇನೇ ಇರಬೇಕಾದರೆ ನಾವು ಹುಟ್ಟಲೇಬಾರದಿತ್ತು' ಎಂದರು ! ಮರುದಿವಸದಿಂದ ಮತ್ತೆ ಅವರಿಗೆ ಸಭಿಕರ ಬರ ಗ್ಯಾರಂಟಿಯಾಯಿತು !

ಹಳ್ಳಿಯವರೊಬ್ಬರು ಬೆಂಗಳೂರಲ್ಲಿ ಸಿನಿಮಾ ನೋಡಲು ಹೊದರು. ಅಲ್ಲಿ ಸಿನಿಮಾದಲ್ಲಿ ಹುಲಿ ಸಿಂಹಗಳು ಹಾರುತ್ತ ನೆಗೆಯುತ್ತ ಕಾಣಿಸಿಕೊಂಡವು. ನಮ್ಮ ಹಳ್ಳಿ ಮಿತ್ರರು ಅಶಾಂತರಾಗತೊಡಗಿದರು. ಪಕ್ಕದಲ್ಲೇ ಇದ್ದ ಹಿರಿಯರೊಬ್ಬರು ಅವರಿಗಂದರು. ಅದು ಬರಿಯ ಸಿನಿಮಾ. ನೀವು ಆರಾಮವಾಗಿರಿ'. ಆಗ ಹಳ್ಳಿಮಿತ್ರರು ಹೀಗಂದರು. 'ಅದು ಸರಿ, ಸ್ವಾಮಿ. ಆದರೆ ಈ ವಿಚಾರ ಆ ಹುಲಿಸಿಂಹಗಳಿಗೂ ಗೊತ್ತೇ ? ಆಗ ಹಿರಿಯರು ಪೆಚ್ಚಾಗಿರಬೇಕು !

ಒಬ್ಬ ಶಾಲಾಬಾಲಕ 'Electricity' ಎಂಬ ಆಂಗ್ಲಪದವನ್ನು ಇಲೆಕ್ಟ್ರಿಕಿಟಿ ಎಂದೇ ಉಚ್ಚರಿಸುತ್ತಿದ್ದ. ಬೇಸತ್ತ ಮಾಸ್ತರರು ಅವನ ತಂದೆಗೆ ಈ ವಿಚಾರ ತಿಳಿಸಿದರು. ಅವರಂದರು, 'ಸಾರ್, ಅವನ ಕೆಪಾಕಿಟಿನೇ (Capacity) ಅಷ್ಟು ! ಮಾಸ್ತರರು ತಾತನ ಬಳಿಗೆ ಹೋದರು. ಆಗವರು. 'ಸಾರ್, ಈ ವಿಚಾರಕ್ಕೆ ಪಬ್ಲಿಕಿಟಿ (Publicity) ಕೊಡಬೇಡಿ, ದಯವಿಟ್ಟು' ಅಂದು ಬಿಡೋದೇ ? ಮಾಸ್ತರರು ಬಂದದಾರಿಗೆ ಸುಂಕವಿಲ್ಲವೆಂದು ಮರಳಿದರು !

13

ಶರಲೇಖನ ಸಾಹಸ!

ಪ್ರಕಾಶ್

ಸಾಹಸದ ನಂಬರ್ ಮರೆತು ಹೋಗಿದೆ! ಓದುಗರು ಕ್ಷಮಿಸಿ ಮುನ್ನಡೆಯ ಬೇಕಾಗಿ ಬಿನ್ನಹ! ಬಕರ ರಸ್ತೆಯ ಸೌಧದ ಕೊಠಡಿ. ಶರಲೇಖ ಅನ್ಯಮನಸ್ಕನಾಗಿ ಪಿಟೀಲು ಬಾರಿಸುತ್ತಾ ಕುಳಿತಿದ್ದಾನೆ. ಇದ್ದಕ್ಕಿದ್ದಂತೆ, ಶರಲೇಖ ರೇಗಿ, "ವತ್ಸನ, ಒಂದು ತಿಂಗಳಿಂದ, ಒಂದೂ ಒಳ್ಳೇ ತಾಜಾ ಕೇಸೂ ಬಂದಿಲ್ಲ! ಹೀಗೇ ನಡೆದರೆ, ನನ್ನ ಪಿಟೀಲು ಸ್ಟ್ರಿಂಗುಗಳನ್ನು ಬದಲಾಯಿಸ ಬೇಕಾಗುತ್ತದೆ' ಎಂದು ಪ್ರಲಾಪಿಸಿದ. ನಾನು ಸಹಾನುಭೂತಿಯಿಂದ ತಲೆದೂಗಿದೆ. 'ಪಿಟೀಲು ಬಾರಿಸದೆ ಇದ್ದರೆ ವಾಸಿ' ಅಂತ ನಾಗು ಗೊಣಗಿದ್ದು ಅವನಿಗೆ ಕೇಳಲಿಲ್ಲ. ಸಧ್ಯ! ಬಾಗಿಲು ತಟ್ಟಿದ ಸದ್ದು. ನಮ್ಮ ಪರಿಚಾರಕ ಹುಸೇನ ಒಳಗೆ ಬಂದ. ಅವನ ಹಿಂದೆಯೇ ದೃಢಕಾಯ ವ್ಯಕ್ತಿ ಒಳಬಂತು. ಭಾರೀ ದೇಹ, ಭರ್ಜರಿ ಸೂಟು, ಬೋ ಟೈ! ನಾನು ಎದ್ದೆ. ಶರಲೇಖ. 'ಕೂರಿ ವಲ್‌ನಾನಿ! ಏನು ಸಮಾಚಾರ ?' ಅಂದ; ನನ್ನ ಏರಿದ ಹುಬ್ಬನ್ನ ನೋಡಿ, 'ಇವರು ಭಾರಿ ಇಂಡಸ್ಟ್ರಿಯಲಿಸ್ಟು!' ಅಂತ ಸೇರಿಸಿದ. ಹುಸೇನ ಎಲ್ಲರಿಗೂ ಕಾಫಿ ತಂದ.

ವಲ್‌ನಾನಿ ತಮ್ಮ ಸಮಸ್ಯೆ ಮುಂದಿಟ್ಟರು. 'ನೋಡಿ, ನಿಮಗೆ ಗೊತ್ತಿರೋ ಹಾಗೇ ನಾನು ಹಲವಾರು ಇಂಡಸ್ಟ್ರೀಸ್ ನಡೆಸಿ, ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡ್ತೀನಿ! ನಂ ಪ್ರಾಡಕ್ಟುಗಳ ಭಾರೀ ಸೇಲ್ಸ್‌ನಿಂದ ಇಷ್ಟು ವರ್ಷವೂ ಸಂತೋಷವಾಗಿದ್ವಿ! ಈಗ. ಕಳೆದ ಒಂದು ವರ್ಷದಲ್ಲಿ, ನಂ ಸೇಲ್ಸ್ ಎಲ್ಲ ಕ್ರಮೇಣ ಕಮ್ಮಿ ಆಗ್ತಾ ಇವೆ. ಶುರೂಲಿ ನಾನು ಅಷ್ಟು ಗಾಬರಿ ಪಟ್ಟಿರಲಿಲ್ಲ! ಈಗ ಪರಿಸ್ಥಿತಿ ಗಂಭೀರ ಆಗ್ತಾ ಇದೆ! ನಾನೂ ಎಲ್ಲ ತರಹ ತನಿಖೇನೂ ಮಾಡಿದೆ. ಟಿ ವಿ. ಜಾಹೀರಾತನ್ನೆಲ್ಲ ರೀಮೇಕ್ ಮಾಡ್ದೆ! ಏನೂ ಉಪಯೋಗ ಇಲ್ಲ. ಕಡೆಗೆ ಅಮೆರಿಕದಿಂದ ತಜ್ಞನೊಬ್ಬನನ್ನೂ ಕರೆಸಿದ್ದಾಯ್ತು. ಅವನು (ಭಾರೀ ದುಬಾರಿ ಆಸಾಮಿ), ಮೂರು ತಿಂಗಳು ಸಂತೋಷವಾಗಿ ನಂ ಖರ್ಚಿನಲ್ಲಿ ತಿಂದೊ ಕುಡಿದೂ. ಕೊನೆಗೆ ನಿಂ ಬಿಸಿನೆಸ್ ಕಲ್ಚರ್ ನನಗರ್ಥ ಆಗಲ್ಲ ಅಂತ ವಿಮಾನ ಏರೇ ಬಿಟ್ಟ. ಈಗ, ನಿಂ ಹೆಸರು ಕೇಳಿ ದೀನನಾಗಿ ಬಂದಿದೀನಿ!'

ವಲ್‌ನಾನಿಯ ದಾರುಣ ಕತೆ ಕೇಳಿನಾನು ದುಃಖಿತಪ್ಪನಾದೆ. ಶರಲೇಖ ಹೇಳಿದ– 'ಅಲ್ಲ ವಲ್‌ನಾನಿ ಅವರೇ, ನಾನು ಡೀಲ್ ಮಾಡೋದು ಕ್ರೈಂ ರಿಲೇಟೆಡ್ ಸಂಗತಿಗಳು – ಇದೇನೋ ಬಿಸಿನೆಸ್ ಡಿಬೆಕಲ್! ನನಗೂ ಇದಕ್ಕೂ ಸಂಬಂಧ ಇರೋ ತರಹ ಕಾಣುಲ್ಲ! 'ಅವನ ಕಠೋರ ಮಾತುಗಳನ್ನ ಕೇಳಿ ವಲ್‌ನಾನಿ ಕಣ್ಣಂಚಲ್ಲಿ ನೀರು ಕಂಡಿತು. ನಾನು ಹೇಳಿದೆ. "ಅಲ್ಲ ಶರಲೇಖ, ಇಲ್ಲೂ ವಲ್‌ನಾನಿ ಕಾಂಪೆಟಿಟರ್ಸ್ ಕೈವಾಡ ಇರಬಹುದಲ್ಲ! ಕೇಸ್ ಕೈಗೆ ತಗೋ! "ಶರಲೇಖ ಪ್ರಸನ್ನನಾದ. ಒಂದು ತಿಂಗಳ ಹಿಂದೆ 'ಅಪಹರಿತ ಮಂತ್ರಿ'ಯ ಕೇಸ್ ಸಾಲ್ವ್ ಮಾಡಿದಾಗ ಅವನ ಕಣ್ಣಲ್ಲಿ ಕಂಡ ಹೊಳಪು ಪುನಃ ಕಂಡಿತು! ವಲ್‌ನಾನಿ ಸಂತೋಷದಿಂದ ಚಂಗನೆ ಎಗರಲು ಪ್ರಯತ್ನಿಸಿದ (ಅವನ ಸ್ಥೂಲಕಾಯದ ಪ್ರಯುಕ್ತ ಛಂಗನೆ ಎಗರಲು ಸಾಧ್ಯವಾಗಲಿಲ್ಲ!). ಜೇಬಿನಿಂದ ಚೆಕ್ ಬುಕ್ ತೆಗೆದ, ಅಡ್ವಾನ್ಸ್ ಕೊಡಲು. ನಾನು ಕಣ್ಣುಸನ್ನೆಯಿಂದ ಬೇಡ ಅಂತ ಸೂಚಿಸಿದೆ. ಶರಲೇಖ ಸಧ್ಯ ಚೆಕ್‌ಬುಕ್ ನೋಡಲಿಲ್ಲ: ಪಿಟೀಲು ಕೇಸ್‌ನಲ್ಲಿ ಇಡ್ತಾ ಇದ್ದ.

ಸರಿ, ದಿ ಗೇಂ ವಾಸ್ ಅಫುಟ್! ವಲ್‌ನಾನಿ ಪ್ರಕಾರ ವರ್ಸ್ಟ್‌ಹಿಟ್ ಪ್ರಾಡಕ್ಟ್‌ಗಳು ಹೆಂಗಸರ ಸೋಪು, ಶೃಂಗಾರ ಸಾಮಗ್ರಿಗಳು, ಸೆಂಟ್‌ಗಳು ಇತ್ಯಾದಿ ಅತ್ಯಗತ್ಯ(!) ವಸ್ತುಗಳು. ಶರಲೇಖ ಸಿಗರೇಟ್ ಹೊಗೆಯನ್ನ ಸುರುಳಿ ಬಿಡುತ್ತ ಹೇಳಿದ. 'ವತ್ಸನ ಈ ಡ್ರಾಪಿಂಗ್ ಸೇಲ್ಸ್‌ಗೆ ಕಾರಣಗಳು ಯಾವುವು? ಟಿ.ವಿ. ಜಾಹೀರಾತುಗಳದ್ದು ತಪ್ಪಿರಲಾರದು! ಬಹಳ ರಿಸರ್ಚ್ ಮಾಡಿ ತಯಾರಿಸ್ತಾರೆ ಅವನ್ನ. ಭಾರತದ ಹೆಂಗಸರೆಲ್ಲ ಟಿ. ವಿ. ನೋಡೋದು ನಿಲ್ಲಿಸ್ತಾರೆ ಅನ್ನೋದು ತೀರ ಅಸಂಭವ. ಇನ್ನೇನು ಕಾರಣ?

ನಾನು: ಭಾರತದ ಹೆಂಗಸರೆಲ್ಲ ಬಹು ಜಾಣೆಯರಾಗಿ, ಈ ಐಟಂಸ್ ಬೇಡ ಅಂತ ಡಿಸೈಡ್ ಮಾಡಿರೋದು – ಅದೂ ಅಸಂಭವ!!

ಶರಲೇಖ: ಭೇಷ್, ವತ್ಸನ! ಒಪ್ಪಿದೆ ನಿನ್ ಮಾತು! ಹಾಗಾದರೆ ಸಮಸ್ಯೆ ಗಹನಾಕೃತಿ ತಾಳ್ತಾ ಇದೆ.

ಮುಂದಿನ ಒಂದು ವಾರ ಶರಲೇಖ ಬಹಳ ಸಿಸ್ಟೆಮ್ಯಾಟಿಕ್ಕಾಗಿ ಇನ್‌ವೆಸ್ಟಿಗೇಟಿದ. ದಿನಾ ರಾತ್ರಿ ಸುಸ್ತಾಗಿ ಮನೆಗೆ ಬರ್ತಿದ್ದ. ಕಾಸ್ಮೆಟಿಕ್ ಅಂಗಡಿಗಳು, ಸೇಲ್ಸ್ ಗರ್ಲ್‌ಗಳು, ವಲ್‌ನಾನಿ ಕಾರ್ಖಾನೆ ಎಲ್ಲ ಕಡೇನೂ ಭೇಟಿ ಕೊಟ್ಟ.

ಭಾನುವಾರ ಬೆಳಗ್ಗೆ ಕಾಫೀ ಕುಡೀತಾ ಹೇಳಿದ. 'ವತ್ಸನ, ಇದು ವಲ್‌ನಾನಿ ಕಾಂಪೆಟಿಟರ್ಸ್‌ದೇ ಕೆಲಸ ಅನ್ನೋದ್ರಲ್ಲಿ ಯಾವ ಅನುಮಾನಾನೂ ಇಲ್ಲ. ಒಂದೆರಡು ಬಿಸಿಬಿಸಿ ಕ್ಲೂಗಳು ಸಿಕ್ಕಿವೆ. ಈ ಸಮಸ್ಯೆ ಪರಿಹಾರಕ್ಕೆ ನಿನ್ನ ಸಹಾಯ ಅತ್ಯಗತ್ಯ ಅಂದ. ಅಂದು ಸಂಜೆ ಸ್ನೇಹಿತರೊಬ್ಬರ ಮನೆಗೆ ಟೀಗೆ ಹೋದೆವು. ಶರಲೇಖ ನನಗೆ ಸೂಚಿಸಿದ ಹಾಗೇ, ನಾನು ಟಿ.ವಿ. ನೋಡ್ತಿದ್ದ ಇಬ್ಬರು ಯುವತಿಯರ್ನೇ ಗಮನಿಸುತ್ತ ಇದ್ದೆ. ಕಮರ್ಷಿಯಲ್ ಬಂದಾಗ ಇಬ್ಬರೂ ಚಕ್ಕನೆ ಡೇಸ್ಡ್ ಆಗಿ ಕೂತಹಾಗೆ ಕಂಡರು. ಕಮರ್ಷಿಯಲ್ ಮುಗಿದ ತಕ್ಷಣ ಯಥಾಪ್ರಕಾರ ಪ್ರೋಗ್ರಾಂ ನೋಡ್ತಾ ಕೂತರು. ಮನೆಗೆ ಬಂದ ಮೇಲೆ ಶರಲೇಖ ವಿವರಿಸಿದ. 'ನೋಡು ವತ್ಸನ, ನೀನು ಗಮನಿಸಿದ್ದೇನು ?'

ನಾನು : ಆ ಯುವತಿಯರು ಕಮರ್ಷಿಯಲ್ ಬಂದಾಗ ಯಾಕೆ ಹಾಗೆ ಗರಬಡಿದವರಂತೆ ಕೂತರು ?

ಶರಲೇಖ : ಹಾ! ಅದೇ ಸೆಲ್ಫ್ ಹಿಪ್ನಾಟಿಸಂ !

ನಾನು : ಅಂದರೆ ?

ಶರಲೇಖ : ಅಂದರೆ, ಭಾರಿ ಡಯಬಾಲಿಕಲ್ ಪ್ಲಾನೊಂದು ನಡೀತಿದೆ! ಇದರ ಮೂಲ ಹುಡುಕಲೇ ಬೇಕು! ಶರಲೇಖನ ಕಣ್ಣುಗಳಲ್ಲಿ ಕೋಪದ ಹೊಳಪು ಕಾಣುತ್ತಿತ್ತು.

ಮಾರನೆಯದಿನ ನಗರದ ಬಡಾವಣೆಯ ಭಾರೀ ಮಹಲೊಂದಕ್ಕೆ ಹೋದೆವು ಪರಿಚಾರಕನೊಬ್ಬ ಬಾಗಿಲು ತೆರೆದ. ನಾವು ಮೆತ್ತನೆ ಸೋಫಾದ ಮೇಲೆ ಕೂತೆವು ಒಳಗಿಂದ, ಒಬ್ಬ ಕುಳ್ಳ ಆಸಾಮಿ ಬಂದ. ಶರಲೇಖನ್ನ ನೋಡಿ, 'ಬರಬೇಕು, ಬರಬೇಕು, ನನ್ನ ಬಡಸೌಧಕ್ಕೆ ಸ್ವಾಗತ !' ಅಂತ ವ್ಯಂಗ್ಯವಾಗಿ ಮಾತಾಡಿದ. ಶರಲೇಖ ಗಂಭೀರವಾಗಿ. 'ಮರಿಯಾಟ್ಟಿ ! ನಿನ್ನನ್ನು ಡಾಕ್ಟರ್ ಅಂತ ಕರೆಯುಕ್ಕೆ ನನಗೆ ಬಾಯಿ ಬರುಲ್ಲ! ನಿನ್ನ ಸೈಕಿಯಾಟ್ರಿ ಜ್ಞಾನವನ್ನು ದುರುಪಯೋಗ ಮಾಡುತ್ತಿಯ ? ಅಂದ. ಡಾ. ಮರಿಯಾಟ್ಟಿ ನಕ್ಕ. 'ನೀನು ಹೇಳೋದು ನನಗೆ ಅರ್ಥವಾಗ್ತಾ ಇಲ್ಲ' ಅಂದ. ಶರಲೇಖ ಎದ್ದ. 'ನನಗೆ ಕಾಲವ್ಯರ್ಥಮಾಡಲು ಇಷ್ಟವಿಲ್ಲ ! ನಿನ್ನ ಮನೋವಿಕಾಸ ಕೇಂದ್ರಗಳ ಕಾರ್ಯ ನನಗೆ ಅರ್ಥ ಆಗಿದೆ! ಈ ಕಾರ್ಯ ಕ್ರಮಗಳನ್ನ ಕೂಡಲೇ ನಿಲ್ಲಿಸದಿದ್ದರೆ ಪೋಲೀಸರಿಗೆ ಕೆಲಸ ಹೆಚ್ಚಾಗುತ್ತೆ' ಅಂದ, ಡಾ. ಮರಿಯಾಟ್ಟಿ ನಡುಗಿದ. 'ನಿನಗೆ...!ಎಲ್ಲಾ ಹೇಗೆ ತಿಳೀತು....' ಅಂತ ತೊದಲಿದ.

ಮುಂದಿನ ಮೂರು ತಿಂಗಳಲ್ಲಿ ವಲ್‌ನಾನಿ ಬಿಸಿನೆಸ್ ಚುರುಕಾಯಿತು. ಸೇಲ್ಸ್ ಹೆಚ್ಚಾಗಿ ವಲ್‌ನಾನಿ ಸಂತುಷ್ಟನಾದ. ಒಂದು ಸಂಜೆ ನಾವೆಲ್ಲ ಕಂಟ್ರಿ ಕ್ಲಬ್ಬಿನಲ್ಲಿ ಕೂತಿದ್ದಾಗ ಶರಲೇಖ ವಿವರಿಸಿದ. 'ವಲ್‌ನಾನಿ ವಿರೋಧಿಗಳು, ಮರಿಯಾಟ್ಟಿಗೆ ಭಾರೀ ಹಣ ಕೊಟ್ಟು, ಮನೋವಿಕಾಸ ಕೇಂದ್ರಗಳನ್ನ ಶುರು ಮಾಡಿಸಿದರು. ಅವರಲ್ಲಿ ಕಮರ್ಷಿಯಲ್ ಬಂದಾಗ ಸೆಲ್ಫ್ ಹಿಪ್ನಾಟಿಸಂ ಆಗೋ ತರಹ ಬ್ರೇನ್‌ವಾಷ್ ಮಾಡ್ತಾ ಇದ್ರು! ಆದರೆ, ಶರಲೇಖನ ಬುದ್ಧಿಗೆ ಇವೆಲ್ಲಾ ಸಿಂಪಲ್ ಸಮಸ್ಯೆಗಳು !' ನಾವೆಲ್ಲ ತಲೆದೂಗಿದೆವು.

ಈಗ, ವಲ್‌ನಾನಿ ಕಳಿಸಿದ ಶೃಂಗಾರ ಸಾಮಗ್ರಿಗಳನ್ನೆಲ್ಲ ಏನು ಮಾಡೋದು ಅಂತ ಯೋಚಿಸ್ತಾ ಕೂತಿದೀವಿ !

ಘೋಷಾಲ್ ಹೇಳಿದ ಕತೆ

ಬಡಗಿಯನ್ನ ಶೂಲಕ್ಕೇರಿಸಲು ಸಿದ್ಧತೆ ನಡೆದಿತ್ತು. ಹಾದಿಯಲ್ಲಿ ಸಾಗುತ್ತಿದ್ದ ರಾಜ, ಒಳ್ಳೆಯ ಮೂಡಿನಲ್ಲಿದ್ದ. "ಅಪರಾಧಿಯ ಕೊನೇ ಆಸೆ ಏನು ಕೇಳಿ. ಅದನ್ನು ನೆರವೇರಿಸಿ, ಅನಂತರ ಶೂಲಕ್ಕೇರಿಸಿ" ಅಂತ ಹೇಳಿ ಮುಂದೆ ನಡೆದ. ದಂಡಾಧಿಕಾರಿ ಅಪರಾಧಿನ ಕೇಳಿದ. ಅಪರಾಧಿ "ಸ್ವಾಮಿ, ನಾನೊಂದು ಮರದ ಕುದುರೆ ಮಾಡ್ತಾ ಇದೇನೆ. ಒಂದು ವರ್ಷದಲ್ಲಿ ಅದನ್ನು ಹಾರೊ ಕುದುರೆ ಮಾಡ್ತೀನೆ. ಅಷ್ಟು ದಿನ ಪ್ರಾಣಭಿಕ್ಷೆ ಕೊಡಿ, ಆಮೇಲೆ ಶೂಲಕ್ಕೇರಿಸಬಹುದು" ಅಂದ. ಬಡಗಿಯ ಬಿಡುಗಡೆಯಾಯಿತು. ಅವ ಮನೆಗೆ ಹಿಂದಿರುಗಿದ. ಅವನ ಹೆಂಡ್ತೀಗೆ ಏನೇನೂ ಸಮಾಧಾನವಿಲ್ಲ. ಒಂದು ವರ್ಷ ಮಾತ್ರ ಕೇಳಿದ್ರಲ್ಲಾ ಅಂತ ಆಕ್ಷೇಪಿಸಿದಳು. ಬಡಗಿ ಹೇಳಿದ

"ಅಲ್ಲಾ ಕಣೆ, ಈ ಒಂದು ವರ್ಷದಲ್ಲಿ ಏನೆಲ್ಲಾ ಆಗಬಹುದು. ಯೋಚಿಸು ಮೊದಲಿಗೆ ರಾಜ ಸಾಯಬಹುದು. ಆಗ ಮುಂದೆ ಬರೊ ರಾಜ ನನ್ನನ್ನು ಮಾಫಿ ಮಾಡಬಹುದು. ಇಲ್ಲಾ ನಾನೇ ಸಾಯಬಹುದು ಹಾಗಾದ್ರೆ ಶೂಲತಪ್ಪುತ್ತೆ ಇನ್ನೂ ಒಂದು ಸಾಧ್ಯತೆಕೂಡ ಇದೆ"

"ಏನದು" ?

"ಕುದುರೆ ನಿಜವಾಗಿಯೂ ಹಾರೇ ಬಿಡಬಹುದು. ಆಗ ಅದರ ಮೇಲೆ ಕೂತು ಇಬ್ರೂ ಇಲ್ಲಿಂದ ತಪ್ಪಿಸಿಕೊಂಡು ಹೋಗೇ ಬಿಡಬಹುದು" ಅಂದನಂತೆ

"ಘೋಷಾಲ್‌ರವರೆ ಈ ಕತೆ ಪ್ರಸ್ತಾಪ ಏಕೆ ಬಂತು ? " ಅಂತ ಕೇಳಿದೆ ಅವರು ಹೇಳಿದರು

"ಅಲ್ರೀ ನೀವು ಮುಂದಿನ ಬಜೆಟ್ ನಂತರ ದೇಶದ ಆರ್ಥಿಕ ಪರಿಸ್ಥಿತಿ ಏನಾಗಬಹುದು ಅಂತ ಕೇಳಿದ್ರಲ್ಲಾ, ಕುದುರೆ ಹಾರೇಬಿಡಬಹುದು ಅದೂ ಸಾಧ್ಯ ಅಂತ ಹೇಳೋದಕ್ಕೆ ಮುಂಚೆ ಪೀಠಿಕೆ ಹಾಕ್ದೆ ಅಷ್ಟೆ" ಅಂದ್ರು ಘೋಷಾಲ್ ಘಾಟಿ ಆಸಾಮಿ !

17

"ವಿವಿಧ ವಿಮರ್ಶೆಗಿಳಿದಾಗ"

ನಂದಿನಿ ಕಾಪಡಿ

ನಮ್ಮ ಸ್ನೇಹಿತರಾದ ರವಿ ತಾವು ತಮ್ಮ ಹನ್ನೆರಡುಸಾವಿರ ರೂ ಸಂಬಳ (ವರ್ಷಕ್ಕಲ್ಲ)ದ ಕೆಲಸಕ್ಕೆ ರಾಜೀನಾಮೆ ನೀಡಿ ಸಿನಿಮಾ ಪತ್ರಿಕೆ "ತಾರಾ ಪ್ರಪಂಚ" ತೆಗೆಯುವುದಾಗಿ ಹೇಳಿದಾಗ ನಾವೆಲ್ಲಾ ಸ್ವಲ್ಪ ಎಚ್ಚರಿಕೆ ಹೇಳಲೇಬೇಕಾಯ್ತು. "ನಕ್ಷತ್ರ ಧೂಳು" "ತಾರೆ ಮತ್ತು ಶೈಲಿ", "ಸಿನಿಮಾ ಸಮಯ," "ತಾರೆ ಮತ್ತು ಜನತೆ" ಮುಂತಾದ ಹತ್ತಾರು ಪತ್ರಿಕೆಗಳು ತರಹಾವರಿ ಲೇಖನಗಳನ್ನು ಹಾಗೂ ತರಹಾವರಿ ಚಿತ್ರಗಳನ್ನು ಛಾಪಿಸಿ ವ್ಯಾಪಾರದಲ್ಲಿದ್ದವು. ಅಂತಹುದರಲ್ಲಿ "ತಾರಾ ಪ್ರಪಂಚ" ದಂತಹ "ಒಳ್ಳೆಯ ಪತ್ರಿಕೆ"ಗೆ ಅವಕಾಶವೆಲ್ಲಿ?

ಆದರೆ ರವಿ ಹಟದ ಮನುಷ್ಯ. ತಮ್ಮ ಛಲ ಸಾಧಿಸಿಯೇ ಬಿಟ್ಟರು. "ತಾರಾ ಪ್ರಪಂಚಕ್ಕೆ" ತಾರೆಗಳೇ ಅಲ್ಲದೆ ಲಕ್ಷ್ಮೀದೇವಿಯೂ (ತಾರೆಯಲ್ಲ–ಸಾಕ್ಷಾತ್ ವಿಷ್ಣು ಪರಮಾತ್ಮನ ಪತ್ನಿ) ಒಲಿದು ಒಂದೇ ವರ್ಷದಲ್ಲಿ ಅದು ಅತ್ಯಂತ ಪ್ರಸಿದ್ಧ ತಾರಾ ಪತ್ರಿಕೆಯಾಗಿಬಿಟ್ಟಿತು. ನಟಿ ಮಾಲಿನಿ ಮಹೇಶನಿಗೆ ಮುತ್ತುಕೊಟ್ಟ ಚಿತ್ರದೊಂದಿಗೆ ಪ್ರಾರಂಭವಾದದ್ದು ಪ್ರತಿ ಸಂಚಿಕೆಯಲ್ಲೂ ಬಿಸಿ ಬಿಸಿ ಸುದ್ದಿಗಳನ್ನು ಚಿತ್ರಿಸುತ್ತಾ, ಮೈ ನವಿರೇಳಿಸುವ ಚಿತ್ರಗಳನ್ನು ಛಾಪಿಸುತ್ತಾ ಹನ್ನೆರಡು ತಿಂಗಳು ಕಳೆಯುವುದರೊಳಗೆ ತಮ್ಮ ಪತ್ರಿಕೆಗೆ ಮೊದಲನೇ ರೇಟಿಂಗ್ ಬರಿಸಿಯೇಬಿಟ್ಟರು ರವಿ. ನಟವರ ನಂದನ್ ನವನಟಿ ನಂದಿತಾಳನ್ನು "ನನ್ನ ನಿನ್ನ ನಂಟು" ಚಿತ್ರದ ನರ್ತನದ ಶೂಟಿಂಗ್ ನಡೆಯುತ್ತಿದ್ದಾಗ ನಗುನಗುತ್ತಾ ನಲ್ಮೆಯಿಂದ ನೋಡುತ್ತಿರುವ ದೃಶ್ಯದಿಂದ ಪ್ರಾರಂಭವಾದ ಪತ್ರಿಕೆ ಎರಡೇ ತಿಂಗಳುಗಳಲ್ಲಿ ಅವರಿಬ್ಬರ ಮದುವೆಯ ಚಿತ್ರವನ್ನೂ ಛಾಪಿಸಿತು.

'ತಾರಾ ಪ್ರಪಂಚ'ದ ಮುಖ್ಯ ಭಾಗ ಆ ವಾರದಲ್ಲಿ ರಿಲೀಸ್ ಆಗುವ ಯಾ ಆದ ಚಿತ್ರಗಳ ವಿಮರ್ಶೆಗೆ ಮೀಸಲಾಗಿತ್ತು. ವಿಮರ್ಶಕರು ಬೇರೆ ಯಾರೂ ಆಗಿರದೆ ರವಿಯ ಆಪ್ತಮಿತ್ರ ದೊರೆಯಾಗಿದ್ದರು. ದೊರೆಯ ಲೇಖನಿಯ ಹರಿತಕ್ಕೆ ನಿರ್ಮಾಪಕರು, ನಿರ್ದೇಶಕರು ಹಾಗೂ ನವ ನಟನಟಿಯರು ಗಡಗಡನೆ

ನಡುಗುತ್ತಿದ್ದರು. "ತಾರಾ ಪ್ರಪಂಚ"ದಲ್ಲಿ ಐದು ತಾರೆಗಳು ಸಿಕ್ಕರೆ ಚಿತ್ರ ಅತ್ಯುತ್ತಮವೆಂದೂ, ನಾಲ್ಕು ತಾರೆಗಳು ಸಿಕ್ಕರೆ "ನೋಡಿ ಪರವಾಗಿಲ್ಲ" ವೆಂದೂ, ಮೂರು ನಕ್ಷತ್ರಗಳು ಸಿಕ್ಕರೆ, "ನಿಮ್ಮ ದುಡ್ಡಿಗೆ ಮೋಸವಿಲ್ಲ" ವೆಂದೂ, ಎರಡು ನಕ್ಷತ್ರಗಳು ಸಿಕ್ಕರೆ "ತಲೆನೋವು ಬರಿಸಿಕೊಳ್ಳಬೇಡಿ" ಎಂದೂ ಮತ್ತು ಒಂದು ನಕ್ಷತ್ರ ಸಿಕ್ಕರೆ "ಮೂರುದಿನಗಳಿಗಿಂತ ಹೆಚ್ಚು ನಡೆಯುವ ಚಿತ್ರವಲ್ಲ" ಎಂದ ರೇಟಿಂಗ್ ಕೊಡುವ ಮೂಲಕ ದೊರೆ ತಮ್ಮ ದೊರೆತನವನ್ನು ತೋರಿಸುತ್ತಿದ್ದರು.

ದೊರೆ ಎಷ್ಟೊಂದು ಪ್ರಭಾವಶಾಲಿ ವಿಮರ್ಶಕರೆಂದರೆ ಕೇಳುವ ಹಾಗೇ ಇಲ್ಲ. ಎಷ್ಟೋ ಸಲ ಚಿತ್ರದ ನಿರ್ಮಾಪಕರು ತಮ್ಮ ಚಿತ್ರಕ್ಕೆ ಒಳ್ಳೆಯ ರೇಟಿಂಗ್ ಕೊಡ ಬೇಕೆಂದು ಕೇಳಲು ಹೋಗಿ ದೊರೆಯವರ ಹತ್ತಿರ ಮುಖಕ್ಕೆ ಮಂಗಳಾರತಿ ಎತ್ತಿಸಿ ಕೊಂಡು ಬರುತ್ತಿದ್ದರು. ಒಮ್ಮೆ ಒಬ್ಬ ನಟ ದೊರೆಯವರಿಗೆ ಲಂಚ ಕೊಡಲು ಹೋಗಿ ದೊರೆಯ ಹತ್ತಿರ ಅರ್ಧಚಂದ್ರ ಚಿಕಿತ್ಸೆಗೆ ಒಳಗಾಗಿ ಬಾಲ ಮುದುರಿಕೊಂಡು ಹೊರಟು ಹೋಗಿದ್ದ. ಇನ್ನೊಮ್ಮೆ ಮುಗ್ಧ ನಟಿ ಮುಕುಲಾದೇವಿ ದೊರೆಯವರ ಆಫೀಸಿಗೆ ಹೋಗಿ ತನ್ನ ಅತ್ಯುತ್ತಮ ನಗೆ ಪ್ರದರ್ಶಿಸಿ ತನ್ನ ನಟನೆಯ ಬಗ್ಗೆ ಸ್ವಲ್ಪ ಹೊಗಳಬೇಕೆಂದು ಕೇಳಿಕೊಂಡಿದ್ದಳು. ದೊರೆ ಒಂದು ಚೂರೂ ವಿಚಲಿತರಾಗದೆ ಅಷ್ಟೇ ಮುಗ್ಧತೆಯ ನಗು ಬೀರಿ ಅವಳನ್ನು ವಾಪಸು ಕಳಿಸಿದ್ದರು. ಪಂಚತಾರಾ ಹೋಟಲಿನ ಆತಿಥ್ಯ ಕೊಟ್ಟರೂ ಅವರಿಂದೇನೂ ಪಂಚತಾರೆಗಳು ಪ್ರಾಪ್ತವಾಗುವು ದಿಲ್ಲ ಎಂದರಿತ ನಿರ್ಮಾಪಕರು ದೊರೆಯ ಹತ್ತಿರ ಸ್ವಲ್ಪ ಹೆದರಿಕೊಂಡೇ ವ್ಯವಹರಿಸುತ್ತಿದ್ದರು.

ಇಂತಹ ವ್ಯಕ್ತಿ ದೊರೆ ಹುಲುಮಾನವರಿಗೆ ತಾಕುವ ರೋಗವೊಂದನ್ನು ಬರಿಸಿಕೊಂಡು ಒಂದು ವಾರ ಆಫೀಸಿಗೆ ಬರದೇ ಹೋದಾಗ ರವಿ ಹೌಹಾರಿಬಿಟ್ಟರು. ದೊರೆಯ ಕೆಳಗೆ ನುರಿತ ಪಿಳ್ಳೆಯನ್ನು ವಿಮರ್ಶೆಗೆ ಕಳಿಸಿದರು. ಆದರೆ ದುರ್ದೈವಕ್ಕೆ ಪಿಳ್ಳೆ "ಸಿಡಿಲಿನ ಆಕ್ರೋಶ" ಚಿತ್ರದ ಪ್ರೀಮಿಯರ್ ಮುಗಿಸಿಕೊಂಡು ಬರುತ್ತಾ ಸ್ಕೂಟರಿನ ಅಪಘಾತಕ್ಕೆ ಸಿಕ್ಕಿಕೊಂಡು ಎರಡೂ ಕಾಲುಗಳನ್ನು ಮುರಿದುಕೊಂಡು ಆಸ್ಪತ್ರೆಗೆ ದಾಖಲಾಗಿಬಿಟ್ಟರು. ಕೈಗಳೆರಡೂ ಸರಿಯಾಗಿದ್ದರಿಂದ ಆಸ್ಪತ್ರೆಯಿಂದಲೇ ವಿಮರ್ಶೆ ಕಳಿಸಿದರು. ಇನ್ನೇನು ದೊರೆ ಬಂದುಬಿಡುತ್ತಾರೆ ಎಂದು ಕೊಳ್ಳುವ ವೇಳೆಗೆ ದೊರೆಯ ಒಬ್ಬರೇ ಚಿಕ್ಕಪ್ಪ ಸಂತಾನವಿಲ್ಲದೆ ಸತ್ತಿದ್ದರಿಂದ ಅವರ ಆಸ್ತಿ ಯನ್ನೆಲ್ಲಾ ದೊರೆಗೆ ವಿಲ್ಲಿನಲ್ಲಿ ಬರೆದಿದ್ದರಿಂದ, ಕಾನೂನು ಕಾಯದೆ ಎಂದು ಒದ್ದಾಡಿಕೊಳ್ಳುತ್ತಾ ದೊರೆ ತಾವು ಇನ್ನು ಮೂರು ತಿಂಗಳು ಆಫೀಸಿಗೆ ಬರುವು ದಿಲ್ಲವೆಂದು ತಿಳಿಸಿದರು.

ತಲೆ ಮೇಲೆ ಕೈ ಹೊತ್ತು ಕುಳಿತರು ರವಿ..."ನಾನು ಒಳಗೆ ಬರಬಹುದೇ ಅಂಕಲ್" ಎಂದು ಕೀರಲು ಧ್ವನಿಯನ್ನು ಕೇಳಿ ತಲೆ ಎತ್ತಿ ನೋಡಿದರೆ ತಮ್ಮ ಅಣ್ಣನ ಮಗಳು ವಿಮಲಾ ಎದುರಿಗೆ ನಿಂತಿದ್ದಾಳೆ!

"ಅಂಕಲ್, ದೊರೆಯ ವಿಚಾರ ತಿಳಿಯಿತು. ನನ್ನ ಎಲ್.ಎಲ್.ಬಿ. ಮುಗಿದು ರಿಸಲ್ಟ್‌ಗೆ ಕಾಯುತ್ತಿದ್ದೇನೆ. ಜರ್ನಲಿಸಂನಲ್ಲಿ ಸರ್ಟಿಫಿಕೇಟ್ ಕೋರ್ಸ್ ಮಾಡಿದ್ದೇನೆ. ವಿಮರ್ಶೆಯ ಕೆಲಸ ನನಗೆ ಟೆಂಪರರಿಯಾಗಿ ಕೊಟ್ಟು ಬಿಡಿ. ದೊರೆ ಬರುವ ತನಕ ಮಾಡುತ್ತೇನೆ. ಸಂಬಳವೇನೂ ಬೇಡ. ಕಾಲಂಗಳ ಪ್ರಕಾರ ದುಡ್ಡು ಕೊಟ್ಟು ಬಿಡಿ. ಪ್ಲೀಸ್ ಅಂಕಲ್, ಬೇಡ ಎನ್ನಬೇಡಿ" ಎನ್ನುತ್ತಾ ಹಟ ಹಿಡಿದೇ ಬಿಟ್ಟಳು.

ಈ ಕಡೆ ಪತ್ರಿಕೆಯ ಹೊಣೆ, ಆ ಕಡೆ ರಕ್ತದ ನಂಟು! ಕಡೆಗೆ ನೀರಿಗಿಂತ ರಕ್ತವೇ ಗಟ್ಟಿ ಎಂಬ ಗಾದೆಗೆ ತಕ್ಕಂತೆ ರವಿ ರಕ್ತದತ್ತಲೇ ವಾಲಿಬಿಟ್ಟರು. "ವಿಮಿ" ಎಂಬ ಹೆಸರಿನಲ್ಲಿ ವಿಮಲಾ ವಿಮರ್ಶೆಯ ಪ್ರಪಂಚಕ್ಕಿಳಿದಳು.

ವಿಮಿ ನೋಡಿದ ಮೊದಲ ಚಿತ್ರ "ನಿನ್ನ, ನನ್ನ ಮನ," ಕೈಯಲ್ಲಿ ಪ್ಯಾಡು ಹಿಡಿದುಕೊಂಡು ಬಾಯಲ್ಲಿ ಚ್ಯೂಯಿಂಗ್‌ಗಮ್ ಅಗಿಯುತ್ತಾ ಡೆನಿಮ್ ಜೀನ್ಸ್ ಹಾಕಿ ಗೆಳತಿಯೊಂದಿಗೆ ಹೊರಬಿದ್ದಿದ್ದಳು. ವಿಮಿ ಚಿತ್ರ ನೋಡಿದ ನಂತರ ಥಿಯೇಟರ್ ಪಕ್ಕದಲ್ಲಿದ್ದ ಹೋಟಲಿನಲ್ಲಿ ಈರುಳ್ಳಿ ಪಕೋಡಾ, ಕಾಫಿ ಸವಿಯುತ್ತಾ ತನ್ನ ಲೇಖನಿಯನ್ನು ರಂಗಕ್ಕೆ ತಳ್ಳಿದಳು.

"ನನ್ನ ನಿನ್ನ ಮನ" ಬರೀ ರಸ ಹೀನ, ಗೋಜಾದ ಕಥೆ. ಸಿಕ್ಕುಗಳಲ್ಲಿ ಸಿಲುಕಿದ ಸಂಬಂಧಗಳು, ಗಂಟುಗಂಟಾದ ವಿಚಾರಗಳು, ತಂಟೆ, ತಗಾದೆಯ ಸಂಭಾಷಣೆ........ ನಾಯಕ ಬ್ರಿಜೇಶ್ ಸ್ಪಾಂಡಿಲೋಸಿಸ್‌ಗಾಗಿ ಚೆಕ್‌ಅಪ್ ಮಾಡಿಸಿ ಕೊಂಡರೆ ಒಳ್ಳೆಯದು. ಏಕೆಂದರೆ ಅವರು ತಮ್ಮ ಕುತ್ತಿಗೆಯನ್ನು ಅಲುಗಾಡಿ ಸುವುದೇ ಇಲ್ಲ. ನಾಯಕಿ ನೀನಾ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿದ್ದು ಚೆನ್ನಾಗಿಯೇ ಗೊತ್ತಾಗುತ್ತದೆ, ಒಟ್ಟಿನಲ್ಲಿ ಸಿನಿಮಾದ ಮೊದಲು ತೋರಿಸಿದ ಅಮೃತಾಂಜನ್ ಹಾಗೂ ಪೇನ್‌ಜಾನ್ ಮತ್ತು ಅನಾಸಿನ್‌ಗಳ ಜಾಹೀರಾತುಗಳಿಗೆ ಮೋಸ ಮಾಡದ ಚಿತ್ರ." ರವಿ ಮೊದಲಿಗೆ ಆ ವಿಮರ್ಶೆಯನ್ನು ಎಡಿಟ್ ಮಾಡೋಣ ವೆಂದುಕೊಂಡರೂ, ಪಾಪ ಮೊದಲ ಪ್ರಯತ್ನ ಹಾಗೇ ಛಾಪಿಸಿ

ಬಿನೋಣವೆಂದುಕೊಂಡು ಎರಡು ತಾರೆಗಳೊಂದಿಗೆ ವಿಮರ್ಶೆಯನ್ನು ಹಾಕಿಯೇ ಬಿಟ್ಟಳು. "ನನ್ನ ನಿನ್ನ ಮನ" ಹದಿನೈದು ದಿನಗಳಲ್ಲಿ ಊರು ಬಿಟ್ಟು ಹೋಯಿತು !

ವಿಮಿಯ ಎರಡನೆಯ ವಿಮರ್ಶೆ "ಆನೆ, ಸಿಂಹ" ಚಿತ್ರದ್ದು. ಮೊದಲನೇ ಪ್ರಯತ್ನದಿಂದ ಪ್ರೋತ್ಸಾಹಿತಗೊಂಡವಳು ಎರಡನೆಯದಕ್ಕೆ ಸ್ವಲ್ಪ ಹೆಚ್ಚು ಹರಿತ. ವಾದ ಲೇಖನಿಯನ್ನೇ ಉಪಯೋಗಿಸಿಕೊಳ್ಳೋಣ ವೆಂದುಕೊಂಡಳು. ಆದರೆ ಸಿನಿಮಾ ನೋಡಿದ ನಂತರ ತನ್ನ ಧೋರಣೆ ಬದಲಿಸಬೇಕಾಯ್ತು. ಒಬ್ಬ ಮಹಿಳಾ ಲಾಯರ್ ಪುರುಷ ಲಾಯರಿನೊಂದಿಗೆ ಕಾಯದೆ ಪ್ರಪಂಚದಲ್ಲಿ ಸೆಣಸಾಟ ಮಾಡುವ ಕಥೆ. ಎಲ್.ಎಲ್.ಬಿ. ಮಾಡಿಕೊಂಡ ವಿಮಿಗೆ ಸ್ಫೂರ್ತಿ ಕೊಡುವಂತಹ ಚಿತ್ರ. ಸಲೀಸಾಗಿ ನಾಲ್ಕು ತಾರೆಗಳನ್ನು ಪ್ರದಾನ ಮಾಡಿದಳು. ಚಿತ್ರ ಐವತ್ತನೇ ದಿನ ದಾಟಿದಾಗ ನಿರ್ಮಾಪಕರು 'ತಾರಾ ಪ್ರಪಂಚ'ದ ಆಫೀಸಿಗೆ ಬಂದು ಸಿಹಿ ಹಂಚಿ ಹೋದರು! ಡಯಟ್ ಮಾಡುತ್ತಿದ್ದ ವಿಮಿ ಸಿಹಿ ತಿನ್ನಲಿಲ್ಲದಿದ್ದರೂ ಉಬ್ಬಿ ಹೋದಳು !

ಮೂರನೆಯ ಚಿತ್ರ "ದೇವಮಾನವ"ದ ವಿಮರ್ಶೆ ಹೇಗಿತ್ತು. "ಸ್ವರ್ಗಾಧಿ ಪತಿ ಸೈತಾನ ಒಟ್ಟಿಗೆ ರಣರಂಗಕ್ಕಿಳಿಯುತ್ತಾರೆ. ನೀವೆಣಿಸಿಕೊಂಡಂತೆ ದೇವರದೇ ಜಯ ಆದರೆ ಮಾನವನ ರೂಪದಲ್ಲಿ !

ಯುರೇನಿಯಂ ಧಾತುವಿನ ಅಕ್ರಮ ಸಾಗಾಣಿಕೆಯಲ್ಲಿ ತೊಡಗಿದ ಖಳನಾಯಕ ಖಗೇಶ್ ಕಡೆಗೆ ರಕ್ಷಾಮಂತ್ರಿಗಳ ಮುಖ್ಯ ಜಾತ್ಮೀದಾರನಾಗುತ್ತಾನೆ. 'ಭಾರತರತ್ನ' ಪ್ರಶಸ್ತಿ ಇನ್ನೇನು ಬರಬೇಕಾಗುವಾಗ ತನ್ನ ಹಳೆಯ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ತನ್ನನ್ನು ತಾನೇ ಆತ್ಮಹತ್ಯೆಗೆ ಗುರಿಪಡಿಸಿಕೊಳ್ಳಲು ಹೋಗು ತ್ತಾನೆ. ಆದರೆ ರಕ್ಷಾಮಂತ್ರಿಗಳ ಮಗಳು ದುರ್ಗಾ ಅವನನ್ನು ಥೇಟ್ ಪೌರಾಣಿಕ ಕಥೆಗಳ ಶೈಲಿಯಲ್ಲಿ ರಕ್ಷಿಸಿ, ಅವನಿಗೆ ಹೂವಮಾಲೆ ಹಾಕುತ್ತಾಳೆ. ಒಟ್ಟಿನಲ್ಲಿ ಭರ್ಜರಿ ಹೊಡೆತ. ಕುಣಿತಗಳಲ್ಲಿ ಕಥೆಯ ಓಟ ಸಾಗುತ್ತದೆ. ನಿಮ್ಮ ದುಡ್ಡಿಗೆ ಮೋಸವಿಲ್ಲ" ಎಂದು ಮೂರು ನಕ್ಷತ್ರಗಳನ್ನು ದಯಪಾಲಿಸಿದಳು. 'ತಾರಾ ಪ್ರಪಂಚ' ಬಿಡುಗಡೆ ಯಾದ ವಾರವೇ ಖಳನಟ ಖಗೇಶ್ ವಿಮಿಗೆ "ಥ್ಯಾಂಕ್ ಯೂ" ಕಾರ್ಡಿನೊಂದಿಗೆ ಐವತ್ತು ಗುಲಾಬಿಗಳ ಪುಷ್ಪಗುಚ್ಛವನ್ನು ಕಳಿಸಿದ! ಮೊದಲ ಬಾರಿಗೆ ಅವನು ನಟಿಸಿದ ಚಿತ್ರ ಐವತ್ತು ದಿನಗಳನ್ನು ಕಂಡಿತ್ತು !

ದೊರೆ ಕೂಡಾ ವಿಮಿಯ ಪ್ರಯತ್ನ ಮೆಚ್ಚುತ್ತಾ ರವಿಗೆ ಶಾಭಾಷ್ ಹೇಳಿದರು. 'ತಾರಾ ಪ್ರಪಂಚ'ದಲ್ಲಿ ವಿಮಿಗೆ ದೊಡ್ಡ ಸ್ಥಾನವೇ ಸಿಕ್ಕಿತು. ಈಗ ಅವಳು ಮೊದಲಿನಂತೆ ಜೀನ್ಸ್, ಟೀ ಶರ್ಟು ಹಾಕದೇ ಬಣ್ಣ ಬಣ್ಣದ ಸೀರೆಗಳನ್ನುಡುತ್ತಾ ಮೆರೆಯತೊಡಗಿದಳು. ಇತ್ತ ಅವಳ ಎಲ್.ಎಲ್.ಬಿ. ಫಲಿತಾಂಶ ಇನ್ನೂ ಬಂದಿರಲಿಲ್ಲವಾದ್ದರಿಂದ 'ತಾರಾ ಪ್ರಪಂಚ'ವೇ ಈಗ ಅವಳ ಮುಖ್ಯ ಹವ್ಯಾಸವಾಯಿತು.

ವಿಮರ್ಶೆಯೇ ಅಲ್ಲದೆ ಸುದ್ದಿಯ ರಂಗಕ್ಕೂ ಇಳಿದಳು ವಿಮಿ. ನರ್ತಕಿ ನೀನಾ ತನ್ನ ಸದಾಕಾಲದ ಗೆಳೆಯ ನಾಗೇಶನಿಗೆ ಟಾಟಾ ಹೇಳಿ ನವ ನಟ ನೀರಜ್‌ನೊಂದಿಗೆ ಓಡಾಡುತ್ತಿದ್ದನ್ನೂ, ತಾರೆ ಮಧುಚಂದ್ರಿಕಾ ಒಮ್ಮೆ ಮದುವೆಯಾಗಿರುವ ಮಿಲಿಂದನನ್ನು ಇನ್ನೊಮ್ಮೆ ಮದುವೆಯಾಗಿ ಮುದ್ದು ಮಗುವಿನ ಮಾತೆಯಾಗಿರುವುದನ್ನೂ ಕೇಡಿ ಪಾತ್ರಕ್ಕೆ ಪ್ರಸಿದ್ಧರಾಗಿರುವ ಕೇತನ್ ರಾತ್ರಿ ಹನ್ನೆರಡು ಗಂಟೆಗೆ ಒಬ್ಬರೇ ಕಾರಿನಲ್ಲಿ ಹೋಗುತ್ತಿರುವಾಗ ಎದುರಿಗೆ ಗೂಂಡಾಗಳು ಬಂದು ಅವರ ಕೈಗಡಿಯಾರ, ಪರ್ಸ್ ಇವುಗಳೇ ಅಲ್ಲದೆ ಅವರು ತಲೆಗೆ ಹಾಕುವ ವಿಗ್ ಮುಂತಾದುವುಗಳನ್ನು ಕಸಿದುಕೊಂಡು ಹೋದದ್ದೂ ಹಾಗೂ 36-24-36 ಎಂದು ಹೆಸರಾಗಿದ್ದ ತಾರೆ ಕೃತ್ತಿಕಾ ಯಾವುದೋ ಕಾರಣಗಳಿಂದ ನಾಲ್ಕು ಕೆ. ಜಿ. ಹೆಚ್ಚಾಗಿ ಈಗ ಯೋಗ ಚಿಕಿತ್ಸೆಗೆ ಒಳಪಟ್ಟಿರುವರು ಎಂಬ ಹಲವಾರು ರೀತಿ ಬಾತ್ಮಿಯನ್ನು ತನ್ನ ಪ್ರಖರ ಲೇಖನಿಯ ಮೂಲಕ ಬಿತ್ತರಿಸಿದಳು!

ಆದರೆ ವಿಮರ್ಶೆಯ ಕಾರ್ಯದಲ್ಲಿ ವಿಮಿಗೆ ಸಿಗುವ ಅನಂತ ಸುದ್ದಿ ಸಮಾಚಾರಗಳಲ್ಲಿರುತ್ತಿರಲಿಲ್ಲ. "ಸ್ಮೃತಿ" ಎಂದ ಚಿತ್ರದ ವಿಮರ್ಶೆ ಮಾಡುತ್ತಾ ವಿಮಿ ಹೀಗೆ ಬರೆದಿದ್ದಳು. "ಮಳೆಯ ಹನಿಗಳು .... ನಾಯಕಿಯ ಕಣ್ಣೀರು ... ಮತ್ತೆ ಮಳೆಯ ಹನಿಗಳು ... ಮತ್ತೆ ನಾಯಕಿಯ ಕಣ್ಣೀರು. ಹೀಗೆ ಪುನಃ ಪುನಃ ಬರುವ ಒಂದೇ ಮಾದರಿಯ ದೃಶ್ಯಗಳನ್ನು ನೋಡುತ್ತಾ ಪ್ರೇಕ್ಷಕ ತನ್ನ ದುಡ್ಡು ಹೋಯಿತಲ್ಲಾ ಎಂದು ಕಣ್ಣೀರಿಡುವ ಪ್ರಸಂಗ ಬರುತ್ತದೆ. "ಸ್ಮೃತಿ" ಚಿತ್ರವನ್ನು ಎರಡು ವಾರಗಳಾದರೂ ಓಡಿಸಿ ಎಂದು ಹಂಚಿಕೆದಾರರು, ಟಾಕೀಸಿನ ಮಾಲೀಕರಿಗೆ ಕಾಲಿಗೆ ಬಿದ್ದರಂತೆ!

"ದೂರ" ಎಂಬ ಹೊಸ ಅಲೆ ಚಿತ್ರ ಬಂದಾಗ ವಿಮಿ ಕ್ಲುಪ್ತವಾಗಿಯೇ ವಿಮರ್ಶೆ ಬರೆದಳು. "ಸಮುದ್ರದ ಅಲೆಗಳು ... ದಿಗಂತ ... ಮುಳುಗುವ

ಸೂರ್ಯ ... ಕೆಂಪಾದ ಮೋಡಗಳು ... ನಿದ್ದೆಗುಳಿಗೆ ಬರೆದು ಕೊಡಲು ಡಾಕ್ಟರು ಅನುಮಾನಿಸಿದಲ್ಲಿ ಈ ಚಿತ್ರ ನೋಡುವುದು ಒಳ್ಳೆಯದು." ವಿಮರ್ಶೆ ಓದಿದ ರವಿ ಸ್ವಲ್ಪ ಖಾರವಾಗಿಯೇ "ಯಾಕಮ್ಮಾ ವಿಮಲಾ ತುಂಬಾ ಕ್ಲುಪ್ತವಾಗಿ ಬರೆದಿದ್ದೀಯಾ" ಎಂದರು. ವಿಮಿ, "ಅಂಕಲ್ ನಿಜ ಹೇಳಬೇಕೆಂದರೆ ಚಿತ್ರ ನೋಡುತ್ತಾ ನೋಡುತ್ತಾ ನನಗೆ ನಿದ್ದೆ ಬಂದು ಬಿಡ್ತು" ಎಂದು ಅಪರಾಧಿಯ ಮುಖಮಾಡಿ ಹೇಳಿದಳು! ರವಿ ತಮ್ಮ ಸಂಪಾದಕರ ಹಕ್ಕನ್ನು ಚಲಾಯಿಸಿಯೇ ಬಿಟ್ಟರು. "ದೂರ" ಚಿತ್ರದ ವಿಮರ್ಶೆ ಪ್ರಕಟಿಸಲೇ ಇಲ್ಲ. ಆದರೆ ನಿಜವಾಗಿ "ದೂರ" ಹತ್ತೇ ದಿನಗಳಲ್ಲಿ ಊರು ಬಿಟ್ಟಾಗ ರವಿಗೆ ಪಾಪ ವಿಮಲಾ ಏನಂದುಕೊಂಡಳೋ ಎನಿಸಿತು!.

ಇಷ್ಟರಲ್ಲಿ ವಿಮಿಯ ತಂದೆ ತಾಯಿಗಳು ಅವಳಿಗೆ ತಕ್ಕ ಗಂಡು ಹುಡುಕುವುದರಲ್ಲಿ ಯಶಸ್ವಿಯಾದರು. ಕಂಪ್ಯೂಟರ್ ಇಂಜಿನಿಯರ್ ಗಣೇಶ್ ವಿಮಿಯ ಸೌಂದರ್ಯಕ್ಕಿಂತ ಅವಳ ಬುದ್ಧಿಗೆ ಮಾರುಹೋದನಂತೆ! ಮದುವೆಗೆ ಇನ್ನೂ ಸಮಯವಿದ್ದರಿಂದ ವಿಮಿ ಮತ್ತು ಗಣೇಶ್ ತಮ್ಮ "ಕೋರ್ಟ್ ಶಿಪ್" ಆರಂಭಿಸಿದರು. ವಿಮಿ ಗಣೇಶನೊಂದಿಗೆ ಮುಂದಿನ ಚಿತ್ರ "ಸಾಲು" ನೋಡಲು ಹೊರಟಳು. ಅದರ ವಿಮರ್ಶೆ ಹೀಗೆ ಬರೆದಳು.

"ಸಾಲು ಪ್ರೇಮಿಗಳ ಚಿತ್ರ. ಎರಡೂ ಬದಿಗಳಲ್ಲಿ ಉನ್ನತ ಶಿಖರಗಳು, ತಂಗಾಳಿಗೆ ನರ್ತಿಸುವ ನೀಲಗಿರಿ ವೃಕ್ಷಗಳು, ಅಂಕು ಡೊಂಕಿನ ರಸ್ತೆ, ಮುಳುಗುತ್ತಿರುವ ಸೂರ್ಯ ಆಗಸಕ್ಕೆ ಮುತ್ತಿಟ್ಟಂತೆ ತೋರುವ ಕೆಂಪಾದ ಮೋಡಗಳಲ್ಲಿ ಪ್ರಾರಂಭವಾಗುವ ಚಿತ್ರ. ಅತಿ ಸುಂದರ ಸಂಬಂಧಗಳು...ಪ್ರೇಮಿಗಳ ಮಿಲನ. . ನಂತರ ಸೇರ್ಪಡೆ....ಮತ್ತೆ ಮಿಲನ. . . ಸುಂದರವಾದ ಈ ಚಿತ್ರವನ್ನು ಪ್ರೇಮಿಗಳೆಲ್ಲರೂ ನೋಡಲೇಬೇಕು." ರವಿ ವಿಮರ್ಶೆ ಓದಿದವರೇ ಕಣ್ಣು ಕೆಂಪು ಮಾಡಿಕೊಂಡು "ಇದೇನು ವಿಮಲಾ ಯಾಕೋ ಚಿತ್ರವನ್ನೇ ನೀನು ನೋಡಿದ ಹಾಗಿಲ್ಲ" ಎಂದು ದಬಾಯಿಸಿದಾಗ ವಿಮಿ ಕಣ್ಣಿನಲ್ಲಿ ನೀರು ತುಳುಕಿಸುತ್ತಾ "ಸಾರಿ ಅಂಕಲ್ ನಾನು ಚಿತ್ರ ಸರಿಯಾಗಿ ನೋಡದಿರಬಹುದು" ಎಂದು ತಪ್ಪೊಪ್ಪಿಕೊಂಡಳು. ವಿಮಿ ಕೊಟ್ಟ ಐದು ತಾರೆಗಳನ್ನು ಕತ್ತರಿಸಿ ರವಿ ಚಿತ್ರಕ್ಕೆ ಮೂರು ತಾರೆಗಳನ್ನು ಪ್ರದಾನ ಮಾಡಿ ಪ್ರೆಸ್ಸಿಗೆ ಕಳಿಸಲು ತರಾತುರಿಯಿತ್ತು! ಇಲ್ಲದಿದ್ದರೆ ರವಿಯವರೇ ಖುದ್ದಾಗಿ ಚಿತ್ರವನ್ನು ನೋಡುತ್ತಿದ್ದರೇನೋ!

"ಸಾಲು" ಚಿತ್ರ ಮೊದಲನೇ ವಾರ ಹೌಸ್ ಫುಲ್" ಆದಾಗ ಟಾಕೀಸಿನ ಮಾಲೀಕರು ರವಿಯುವರಿಗೆ ಫೋನ್ ಮಾಡಿ ವಿಮಿಗೆ ತನ್ನ ಧನ್ಯವಾದಗಳನ್ನು ತಿಳಿಸ ಬೇಕೆಂದರು. ಬಿಡುವಿದ್ದಾಗ ವಿಮಿಯನ್ನೂ ಕರೆದುಕೊಂಡು ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ವಿನಂತಿಸಿಕೊಂಡರು.

"ತಾರಾ ಪ್ರಪಂಚದ" ಓದುಗರಿಂದ ಬರುವ ಪತ್ರಗಳು ರವಿಯವರಿಗೆ ತಮ್ಮ ಪ್ರಯತ್ನಕ್ಕೆ ಸಿಗುವ ಪ್ರಶಸ್ತಿಗಳಂತೆ ತೋರುತ್ತಿದ್ದವು. ಒಬ್ಬ ಅಭಿಮಾನಿ ಕೆ. ಮಲ್ಲಪ್ಪ ಪ್ರತಿ ತಿಂಗಳೂ ಪತ್ರ ಬರೆಯುತ್ತಾ ರವಿಗೆ ತಮ್ಮ ಸಹಕಾರ ತೋರಿಸುತ್ತಿದ್ದರು. "ಸಾಲು" ಚಿತ್ರದ ವಿಮರ್ಶೆ ಪ್ರಕಟವಾದ ಎರಡೇ ವಾರಗಳಲ್ಲಿ ಮಲ್ಲಪ್ಪನವರ ಪತ್ರ ಬಂದಿತು.

"ಮಾನ್ಯ ಸಂಪಾದಕರೇ ಹಟಾತ್ತಾಗಿ ನಮ್ಮ ದೊರೆ ಹೊರಟುಬಿಟ್ಟ ನಂತರ ನಿಮ್ಮ ವಿಮರ್ಶೆಯ ಕಾಲಮ್ಮಿಗೆ ಹಾನಿಯೇನಾದರೂ ಆಗುವುದೇನೋ ಎಂದು ಹೆದರಿದ್ದೆ. ಆದರೆ "ವಿಮಿ" ದೊರೆಯಷ್ಟೇ ಉತ್ತಮವಾಗಿ ವಿಮರ್ಶೆ ಮಾಡುವು ದನ್ನು ನೋಡಿ ಖುಷಿಯೇ ಆಯಿತು. ಆದರೆ ಇತ್ತೀಚಿನ ದಿನಗಳಲ್ಲಿ ಅವರ್‍ಯಾಕೋ ಚಿತ್ರವನ್ನು ಸರಿಯಾಗಿ ನೋಡುತ್ತಿಲ್ಲವೆನಿಸುತ್ತಿದೆ. ಉದಾಹರಣೆಗೆ "ಸಾಲು" ಚಿತ್ರದ ಬಗ್ಗೆ ಅವರ ವಿಮರ್ಶೆ ನೋಡಿ ನಾನು ಮತ್ತು ನನ್ನ ಸ್ಟೆಡಿ ಗರ್ಲ್ ಫ್ರೆಂಡ್ ಬ್ಲಾಕ್ ಮಾರ್ಕೆಟ್ಟಿನಲ್ಲಿ ಟಿಕೆಟ್ ಕೊಂಡು ಹೊರಟೆವು. ಆದರೆ ಚಿತ್ರದ ಮೊದಲ ಭಾಗ ಮಾತ್ರ ಪ್ರೇಮಿಗಳದಾಗಿದ್ದು ಮುಂದೆ ನಾಯಕ ತನ್ನ ಗೋಮುಖ ವ್ಯಾಘ್ರದ ಸ್ವಭಾವ ತೋರಿಸುತ್ತಾ ಕೇಡಿಗಳ ನಾಯಕನಾಗಿ ದೇಶದ ರಹಸ್ಯಗಳನ್ನು ಪಾಕಿಸ್ತಾನಿ ಏಜಂಟರಿಗೆ ಹೇಳುತ್ತಾನೆಂದು ಗೊತ್ತಿದ್ದರೆ ಬಹುಶಃ ಚಿತ್ರವನ್ನು ನೋಡಲು ಅಷ್ಟೊಂದು ಗಂಡು ಹೆಣ್ಣು ಜೋಡಿಗಳು ಹೋಗುತ್ತಿರಲಿಲ್ಲವೇನೋ! ಆದರೂ ಪರವಾಗಿಲ್ಲ ಬಿಡಿ ವಿಮಿಯವರ ವಿಮರ್ಶೆಯಿಂದಲಾದರೂ ಆಫೀಸಿಗೆ ಫ್ರೆಂಚ್ ಲೀವ್ ಹಾಕಿ ನನ್ನ ಗರ್ಲ್ ಫ್ರೆಂಡ್ ನನ್ನ ಜೊತೆ ಬಂದಿದ್ದು ಸಂತೋಷ! ವಿಮಿಯವರಿಗೆ ಧನ್ಯವಾದ ತಿಳಿಸಿ. ಇಂತು ಮಲ್ಲಪ್ಪ."

ರವಿಯ ಮುಖ ಕೆಂಪಾಯಿತು. ಕಣ್ಣುಗಳಲ್ಲಿ ಉಗ್ರ ಕೋಪ ತೋರಿ ಬಂದಿತು. ಸೀದಾ ಟೆಲಿಫೋನಿನ ಹತ್ತಿರ ನಡೆದು ಅಣ್ಣನ ಮನೆಗೆ ಫೋನ್ ಮಾಡಿ ವಿಮಿಯನ್ನು ತಕ್ಷಣ ಆಫೀಸಿಗೆ ಕಳಿಸಬೇಕೆಂದರು. ಅವರು ಫೋನ್ ಇಡುವ

ಹೊತ್ತಿಗೆ ವಿಮಿಯೇ ಗಣೇಶನೊಂದಿಗೆ ಹಾಜರಾದಳು. ಕೈಯಲ್ಲಿ ಪೇಡಾ ಡಬ್ಬ ಹಿಡಿದು, ಚಿಕ್ಕಪ್ಪನಿಗೆ ಪೇಢಾ ತಿನ್ನಿಸುತ್ತಾ "ಅಂಕಲ್, ನಾನು ಎಲ್.ಎಲ್.ಬಿಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆಯಾಗಿದ್ದೇನೆ. ನಾಳೆಯಿಂದ ಪ್ರಖ್ಯಾತ ಲೇಬರ್ ಲಾಯರ್ ಲಲಿತಮ್ಮನವರ ಹತ್ತಿರ ಜ್ಯೂನಿಯರ್ ಆಗಿ ಸೇರಿಕೊಳ್ಳುತ್ತಿದ್ದೀನಿ. ಆಶೀರ್ವಾದ ಮಾಡಿಬಿಡಿ ಎಂದು ಬಡಬಡಿಸಿದಳು! ಗಣೇಶ್ ಕೂಡ ಭಾವೀ ಪತ್ನಿಯತ್ತ ಹೆಮ್ಮೆಯಿಂದ ನೋಡಿದ! ರವಿ ತಣ್ಣಗಾದರು. ಅಣ್ಣನ ಮಗಳ ಕೈ ಕುಲುಕಿ ಶುಭಾಶಯ ಹೇಳಿದರು. ನಂತರ ಮತ್ತೊಮ್ಮೆ ಟೆಲಿಫೋನಿನತ್ತ ನಡೆದು ದೊರೆಗೆ S.O.S. ಕಳಿಸಿದರು. ಆ ಕಡೆಯಿಂದ ದೊರೆ ನಾಳೆಯೇ ಕೆಲಸಕ್ಕೆ ಹಾಜರಾಗುವನೆಂದು ಆಶ್ವಾಸನೆ ಕೊಟ್ಟರಂತೆ!

ಅಂದು ರಾತ್ರಿ ರವಿ, ವಿಮಿ ಮತ್ತು ಗಣೇಶನನ್ನು ತಮ್ಮ ಖರ್ಚಿನಲ್ಲಿ ಎಂ.ಟಿ.ಆರ್.ಗೆ ಕರೆದುಕೊಂಡು ಹೋಗಿ ವಿಮಿಯ ಕೈಲಿ ಅವಳು ಬರೆದ ವಿಮರ್ಶೆಗೆಂದು ಧಾರಾಳವಾಗಿ ಐನೂರು ರೂಪಾಯಿಗಳನ್ನು ಕೊಟ್ಟರು. ವಿಮಿ ಕಣ್ಣು ಮಿಟುಕಿಸುತ್ತಾ "ಥ್ಯಾಂಕ್ ಯೂ ಅಂಕಲ್.... ನಾನಂತೂ ನನ್ನ ಕೆಲಸವನ್ನು ತುಂಬಾ ಇಷ್ಟ ಪಟ್ಟೆ" ಎಂದಳು!

ಅಜ್ಜಿ - ಮೊಮ್ಮಗ

ಕಮಲಾ ರಾಮಸ್ವಾಮಿ

ಮೊಮ್ಮಗುವಿಗೆ ಪೂಜೆ, ಪುನಸ್ಕಾರದ ಅರಿವು ಇರಬೇಕು ಅಂತ ಅಜ್ಜೀಗೆ ಆಸೆ. ಮೊಮ್ಮಗ ಮೋಹನನನ್ನ ತೊಡೆ ಮೇಲೆ ಕೂರಿಸಿಕೊಂಡು ಪೂಜೆ ಕಾರ್ಯ ನಡೆಸಿದ್ದರು. ಅಷ್ಟೋತ್ತರ ನಡೆದಿತ್ತು. "ಆಂಜನೇಯಾಯ ನಮಃ, ಹನುಮಂಯ ನಮಃ, ಮಾರುತಿಯೇ ನಮಃ...." ಮೊಮ್ಮಗ ಮಧ್ಯೆ ಬಾಯಿಹಾಕಿದ "ಅಜ್ಜೀ ನಾನು ಹೇಳ್ತೀನಿ ಈಗ.... "ಮಾರುತಿಯೇ ನಮಃ, ಅಂಬಾಸಿದರೇ ನಮಃ, ಕಾಂಟಸ್ಸಾಯ ನಮಃ"

* * *

"ಬೆಳಗ್ಗೆ ಎದ್ದಾಗ ಬಲ ಮಗ್ಗುಲಲ್ಲೇ ಏಳ್ಬೇಕುಮರಿ. ಎದ್ದು ದೇವರ ಪಠಕ್ಕೆ ಕೈ ಮುಗಿದು. . ." ಅಷ್ಟರಲ್ಲಿ ಬಂತು ಮೊಮ್ಮಗನ ಪ್ರಶ್ನೆ "ಯಾಕೆ ?"

"ಯಾಕೇಂದ್ರೆ, ಬಲಗೈನ ಎಲ್ಲಾ ಕೆಲಸಗಳಿಗೂ ಉಪಯೋಗಿಸ್ತೀವಿ. ಬರೆಯೋದು, ಊಟ ಮಾಡೋದು, ಎಲ್ಲಾ ಆ ಕೈಲೇ ಅಲ್ವಾ"

"ಹೌದಾ ಅಜ್ಜೀ, ಹಾಗಾದ್ರೆ ನಾನು ಇನ್ಮೇಲೆ ಎಡಮಗ್ಗುಲಲ್ಲೇ ಏಳ್ತೀನಿ. ನಾನು ಎಡಚ ತಾನೆ"

ಹೊಸ ಸಂಸ್ಕೃತಿ

ಎಂ.ಎಸ್.ಕೆ.

"ಸಂಸ್ಕೃತಿ" ಎನ್ನುವುದು ಬದಲಾಗುವ ವಸ್ತು ಎಂದು ನನ್ನ ವಾದ. "ಮೌಲ್ಯ" ಮತ್ತು "ಸಂಸ್ಕೃತಿ" ಕಾಲ ಕಾಲಕ್ಕೆ ಬದಲಾಗುತ್ತಲೇ ಇರುತ್ತದೆ. ನಮ್ಮ ತಂದೆ ಕಾಲದ ಮೌಲ್ಯಗಳು ಈಗ ಅಪಮೌಲ್ಯವಾಗಿದೆ. ಕೆಲವು ಉದಾಹರಣೆಗಳು :–

1. ಈ TV ಬಂದ ಮೇಲೆ ಬೇರೆಯವರ ಮನೆಗೆ ಹೋಗುವುದಕ್ಕೆ ಭಯ ವಾಗುತ್ತೆ. ಅವರ ಮನೆಗೆ ಫೋನ್ ಇದ್ದರಂತೂ ಮೊದಲೇ ಅಪಾಯಿಂಟ್‌ಮೆಂಟ್ ತೊಗೊಳ್ಳದೆ ಹೋಗುವಂತಿಲ್ಲ. ಹಿಂದಿನ ಕಾಲದಂತೆ ಸ್ಥಳ–ಕಾಲದ ಸಂಕೋಚ ವಿಲ್ಲದೆ ಬೇರೆಯವರ ಮನೆಗೆ ಹೋಗುವಂತಿಲ್ಲ.

ಶ್ರೀ....ಅವರು ಒಂದು ಪಬ್ಲಿಕ್ ಸೆಕ್ಟರ್ ಜನರಲ್ ಮ್ಯಾನೇಜರ್. ನಮ್ಮ ಮನೆ ಹತ್ತಿರವೇ ಅವರ ಮನೆ. ಅವರು ನಮ್ಮನ್ನು ಬಹಳ ಆಕ್ಷೇಪಿಸುತ್ತಿದ್ದರು. ಏನ್ರೀ ? ನಿಮಗೆ ತುಂಬಾ ಜಂಭ. ನಮ್ಮ ಮನೆಗೆ ಬರೋದೇ ಇಲ್ಲಾಂತ. ಒಂದು ಭಾನುವಾರ ಸಂಜೆ ನಾನೂ ನನ್ನ ಹೆಂಡತಿ ವಾಕಿಂಗ್ ಹೋಗುತ್ತಿದ್ದೆವು. ಶ್ರೀ ..ಅವರ ಮನೆ ಮುಂದೆ ಹಾದು ಹೋದೆವು. ನನ್ನವಳು "ಯಾಕ್ರಿ ಅವರ ಮನೆಗೆ ಹೋಗಬಾರದು" ಎಂದಳು. "ಫೋನ್ ಮಾಡಿಲ್ಲ. ಸಿನಿಮಾ ಇದೆ TVಲೀ" ಎಂದೆ. "ಬಿಡ್ರಿ ನೀವ್ಯಾಗಲೂ ಹೀಗೇ. ಎಷ್ಟು ಸಲ ಹೇಳಿದ್ದಾರೆ ಅವರು" ಎಂದು ಅವರ ಮನೆಗೆ ನುಗ್ಗೇ ಬಿಟ್ಟಳು. ನಾನು ಹಿಂಬಾಲಿಸಿದೆ. ಮುಂಬಾಗಿಲು ತೆರೆದಿತ್ತು. TVಯಲ್ಲಿ ಹಿಂದೀ ಚಿತ್ರದ "ಢಿಶುಂ–ಢಿಶುಂ" ಜೋರಾಗಿತ್ತು. ನಾನು "ನಮಸ್ಕಾರ ಶ್ರೀ...ಯವರೇ" ಎಂದು ಒಳ ಹೊಕ್ಕೆ. ಅವರ ಮುಖ ಕಪ್ಪಿಟ್ಟಿತು. ಕಣ್ಣುಗಳನ್ನು TVಯಿಂದ ಕೀಳಲಾರದಾದರು.

"ಬನ್ನಿ ಬನ್ನಿ ಕೂಡಿ" ಎಂದು ನಮ್ಮನ್ನು ನೋಡದೇ ಸ್ವಾಗತಿಸಿದರು. ನಾನು "ಏನು ಚಿತ್ರ ಚೆನ್ನಾಗಿದೆಯೇ?" ಎಂದೆ. ಈ Interruption ಸಹಿಸ ದಾದರು. ಮುಖ ಸಿಂಡರಿಸಿದರು. ನಾನೂ ನನ್ನ ಸಹಧರ್ಮಿಣಿ ಪರಸ್ಪರ ನೋಡಿಕೊಂಡು ಎದ್ದು ನಿಂತೆವು. "ನಾವು ಬರ್ತೀವಿ" ಎಂದೆ. ಸಂತೋಷದಿಂದ "ಆಗಲಿ" ಎಂದರು – TV ನೋಡುತ್ತಲೇ !

ನನ್ನ ಗೆಳೆಯರೊಬ್ಬರು ಬೆಂಗಳೂರಿನಲ್ಲಿ ಕೈಗಾರಿಕೋದ್ಯಮಿ. ಅವರು ಉತ್ತರ ಭಾರತದ ಒಂದು ಬೃಹತ್ ಕಾರ್ಖಾನೆಗೆ ಬಿಡಿ ಭಾಗಗಳನ್ನು ಕಳುಹಿಸುತ್ತಾರೆ. ಕಾರಣವಶಾತ್ ಇವರು ಕಳುಹಿಸುವುದು ತಡವಾಯಿತು. ಅವರಿಗೆ ಆ ಕಾರ್ಖಾನೆಯಿಂದ ಒಂದು ಶನಿವಾರ ಫೋನ್ ಬಂತು. ಫೋನ್ ಮಾಡಿದ ಹಿರಿಯ ಆಫೀಸರ್ ನನ್ನ ಸ್ನೇಹಿತರನ್ನು ತುಂಬಾ ಆಕ್ಷೇಪಿಸಿ ನಾಳೆ ಬೆಳಿಗ್ಗೆಯೊಳಗೆ (ಅಂದರೆ ಭಾನುವಾರ) ಬಿಡಿ ಭಾಗಗಳನ್ನು ಕಳುಹಿಸಿ ತಮಗೆ ಫೋನ್ ಮಾಡಿ ತಿಳಿಸಬೇಕೆಂದು ಆಜ್ಞಾಪಿಸಿದರು. ನನ್ನ ಸ್ನೇಹಿತರು ಇಡೀ ರಾತ್ರಿ ಕೆಲಸ ಮಾಡಿ, ಭಾನುವಾರ ಬೆಳಿಗ್ಗೆ ಸರಕು ತುಂಬಿದ ಲಾರಿಯನ್ನು ಬೀಳ್ಕೊಟ್ಟು ಮನೆಗೆ ಬಂದು ಫೋನ್ ಮಾಡಿದರು. ಆದರೆ ಅವರು ಮಾಡಿದ ಮಹಾನ್ ತಪ್ಪು ಗಡಿಯಾರ ನೋಡದಿದ್ದುದು. ಆಗ ಬೆಳಿಗ್ಗೆ 10 ಘಂಟೆ ಸಮಯ. ಆಗ ದೇಶದಲ್ಲಿ TV ಮಹಾಭಾರತ ಪರ್ವ ನಡೆಯುತ್ತಿತ್ತು. ಅಂದು ಕರ್ಣಾರ್ಜುನರ ಯುದ್ಧ ನಡೆಯುತ್ತಿತ್ತೇನೋ ಗೊತ್ತಿಲ್ಲ. ಆಕಡೆಯಿಂದ ಫೋನಿನಲ್ಲಿ ನನ್ನ ಸ್ನೇಹಿತರಿಗೆ ಮಹಾನ್ ಮಂಗಳಾರತಿಯಾಯಿತು. "ನಿಮಗೆ ಮೈಮೇಲೆ ಜ್ಞಾನವಿಲ್ಲವೇನ್ರಿ ?" ಎಂದು ಕೇಳಿ ಫೋನ್ ಕುಕ್ಕಿದರಂತೆ. ಅವರ ಕರ್ತವ್ಯ ಪ್ರಜ್ಞೆ TV Cultureಗೆ ಬಲಿಯಾಯಿತು.

ನಮ್ಮ ಮತ್ತೊಂದು ಸಂಸ್ಕೃತಿಯ ಮುಖ ರಸ್ತೆಯಲ್ಲಿ ನೋಡಬಹುದು. ನಾಮುಂದೆ ತಾಮುಂದೆ ಎಂಬ ಸಂಸ್ಕೃತಿ ಇಲ್ಲಿ ಎದ್ದು ಕಾಣುತ್ತದೆ. ಮೊನ್ನೆ ನಾನು ಕಾರಿನಲ್ಲಿ ಹೋಗುತ್ತಿದ್ದೆ. ಒಂದು ಮಾರುತಿ–1000 ನನ್ನನ್ನು ಹಿಂದೆ ಹಾಕಿ ಮುಂದೆ ಹಾಯಿತು. ಅದರಿಂದ ಒಂದು ವೃತ್ತ ಪತ್ರಿಕೆಯ ಇಡೀ ಹಾಳೆ ಹೊರ ಬಂತು. ಅದು ನನ್ನ ಕಾರಿನ ಪಕ್ಕ ಹೋಯಿತು. ಇದು ನನ್ನ ವಿಂಡ್‌ಸ್ಕ್ರೀನ್ ಅಪ್ಪಿದ್ದರೆ ಏನು ಗತಿ ಎನ್ನುವಷ್ಟರಲ್ಲಿ ಮುಂದಿನ ಕಾರಿನಿಂದ ಮತ್ತೊಂದು ಹಾಳೆ ಹಾರಿ ಬಂತು. ಆ ಕಾರಿನ ಚಾಲಕನಿಗೆ ಬೇರೆಯವರ ಬಗ್ಗೆ ಏನೇನೂ ಕಾಳಜಿ ಇದ್ದಂತಿರಲಿಲ್ಲ. ಆಗ ನನಗೆ "ಕಷ್ಟ ಪಟ್ಟರೂ ಇಲ್ಲ..." ಎಂಬ ದಾಸರ ಪದ ಜ್ಞಾಪಕಕ್ಕೆ ಬಂದು

"ದುಡ್ಡು ಇದ್ದರೂ ಇಲ್ಲ.
ಮಾರುತಿ ಕೈಗೆ ಬಂದರೂ ಇಲ್ಲ
ಇಲ್ಲವೇ ಇಲ್ಲ Road Sence"
ಎಂದು ಕೊಂಡೆ.

ಇದು 90ರ ದಶಕ. ಮುಂದಿನ ಶತಮಾನಕ್ಕೆ ಕೇವಲ 7 ವರ್ಷಗಳಿವೆ. ಮುಂದೆ ನಮ್ಮ ಮೌಲ್ಯ ಮತ್ತು ಸಂಸ್ಕೃತಿ ಯಾವ ಅಧೋಗತಿಗೆ ಇಳಿಯುತ್ತೆ ಎನ್ನುವುದು ಆ ಪರಂಧಾಮನಿಗೂ ತಿಳಿದಿರಲಿಕ್ಕಿಲ್ಲ !

ಸ್ವರಕ್ಷಣೆಯಲ್ಲಿ ಹಾಸ್ಯ

ಎಸ್.ಎಸ್.ಎಸ್.

ಪಾಶ್ಚಾತ್ಯರು ತಮ್ಮ ನಿತ್ಯ ಜೀವನದಲ್ಲಿ ಬರುವ ಸನ್ನಿವೇಶಗಳಲ್ಲಿ ಹಾಸ್ಯವನ್ನು ಕಾಣುತ್ತಾರೆ. ಪರಿಸ್ಥಿತಿ ಬಿಗಡಾಯಿಸಿದಾಗಲೂ ಹಾಸ್ಯದಿಂದ ತಮ್ಮ ದುಗುಡ-ವನ್ನು ಪರಿಹರಿಸಿಕೊಳ್ಳುತ್ತಾರೆ. ಸಮಸ್ಯೆ ಬಂದಾಗ ಎದುರಾಳಿಗಳು ಹಾಸ್ಯದಿಂದ ನಕ್ಕು ಕೋಪತಾಪಗಳು ಹತೋಟಿಮೀರದಂತೆ ನೋಡಿಕೊಳ್ಳುತ್ತಾರೆ.

ಇತರರು ಈ ದೇಶಗಳಿಗೆ ಹೋದಾಗ ಈ ಹಾಸ್ಯ ಸ್ವಭಾವವನ್ನು ರೂಢಿಸಿ ಕೊಂಡರೆ ಅವರ ಕೆಲಸ ಸುಗಮವಾಗುತ್ತದೆ. ಇದನ್ನು ನಾನು ಸ್ವಾನುಭವದಿಂದ ಅರಿತುಕೊಂಡೆ. ಕಾಲನಂತರ ಈ ಹಾಸ್ಯಾಸ್ತ್ರವನ್ನು ಉಪಯೋಗಿಸಿ ನಾನು ಸ್ವರಕ್ಷಣೆಯನ್ನೂ ಕೆಲವುಸಲ "ಆಕ್ರಮಣ" ವನ್ನೂ ಮಾಡುವುದರಲ್ಲಿ ಸಫಲನಾದೆ. ಅದರ ಎರಡು ದೃಷ್ಟಾಂತಗಳನ್ನು ಇಲ್ಲಿ ಕೊಟ್ಟಿದ್ದೇನೆ.

ನಾನು ತರಬೇತಿ ಪಡೆಯುತ್ತಿದ್ದ ಇಂಗ್ಲೆಂಡಿನ ಫ್ಯಾಕ್ಟರಿಯಲ್ಲಿ ಉನ್ನತ ಅಧಿಕಾರಿಯೊಬ್ಬರು ಸ್ಟಾಂಪುಗಳ ಶೇಖರಣೆಯಲ್ಲಿ ಬಹಳ ಆಸಕ್ತರಾಗಿದ್ದರು. ನನಗೆ ಭಾರತದಿಂದ ಕಾಗದಗಳು ಬಂದಾಗಲೆಲ್ಲ ಬಂದ ಸ್ಟಾಂಪುಗಳಲ್ಲಿ ಅಪೂರ್ವವಾದ ದ್ದನ್ನು ಅವರಿಗೆ ಕೊಡುತ್ತಿದ್ದೆ. ಸಾಮಾನ್ಯವಾಗಿ ನಾವು ಭೋಜನ ವಿರಾಮದ ಸಮಯದಲ್ಲಿ ಸೇರಿದಾಗ ಈ ಸ್ಟಾಂಪುಗಳ ವಿನಿಮಯ ನಡೆಯುತ್ತಿತ್ತು. ಆಗ ನಮ್ಮ ದೇಶದ ಸ್ಟಾಂಪುಗಳಲ್ಲಿ ಇಂಡಿಯಾ ದೇಶದ ಭೂನಕ್ಷೆಯನ್ನು ಹೊಂದಿದ್ದ ಸ್ಟಾಪೊಂದಿದ್ದಿತು. ಅದನ್ನು ನಾನು ನನ್ನ ಈ ಸ್ನೇಹಿತರಿಗೆ ಕೊಟ್ಟೆ. ಅವನು ಸ್ಟಾಂಪನ್ನು ನೋಡಿ, ಈ ಭೂನಕ್ಷೆ ತಮಗೆ ತಿಳಿಯದ ದೇಶದ್ದೆಂಬಂತೆ ಮಾತನಾಡಿದರು. ಅವರ ಉದ್ದೇಶವನ್ನು ತಿಳಿಯದನಾನು ಅದು ಇಂಡಿಯಾ ದೇಶದ್ದೆಂದು ಹೇಳಿದೆನು. "ಅದು ಯಾವ ದೇಶ? ಅದು ಇರುವುದು ಶ್ರೀಲಂಕಾದ ಉತ್ತರಕ್ಕೊ ದಕ್ಷಿಣಕ್ಕೋ" ಎಂದು ನನ್ನನ್ನು ಕೇಳಿದರು. ಅವರ ಹಾಸ್ಯದ ಇಂಗಿತವನ್ನು ಅರಿಯದ ನಾನು ಇಂಡಿಯಾದೇಶ ಶ್ರೀಲಂಕಾದ ಉತ್ತರಕ್ಕಿದ್ದು, ಅದರ ವಿಸ್ತೀರ್ಣ ಅಗಾಧವಾದದ್ದೆಂದೂ, ಶ್ರೀಲಂಕಾದ ಹಲವು ಪಟ್ಟು ವಿಸ್ತಾರ ವಾದದ್ದೆಂದೂ ಹೇಳಿದೆ. ನನ್ನ ಸ್ನೇಹಿತರು "ಹಾಗೋ" ಎಂದು ಈ ವಿಷಯ ತಮಗೆ ಒಂದೆ ತಿಳಿಯದಿದ್ದಂತೆ ತೋರ್ಪಡಿಸಿದರು. ಇದಾದ ತಕ್ಷಣವೇ ಈ ನಟನೆ

ಕೇವಲ ಹಾಸ್ಯಕ್ಕಾಗಿ ಮಾಡಿದ್ದೆಂದು ನನಗೆ ಅರಿವಾಯಿತು. ಇದಕ್ಕೆ ತಕ್ಕ ಉತ್ತರ ವನ್ನು ಅವರಿಗೆ ಕೊಡುವ ಅವಕಾಶಕ್ಕೆ ನಾನು ಕಾಯುತ್ತಿದ್ದೆ.

ಇದಾದ ತರುಣದಲ್ಲಿಯೇ ನನ್ನ ಈ ಸ್ನೇಹಿತರು ಮಧ್ಯಾಹ್ನದ ಊಟದ ಸಮಯದಲ್ಲಿ ನನ್ನ ಮೇಜಿಗೆ ಬಂದು ಎದುರಿಗೆ ಕುಳಿತರು. ನಾನು ಅವರೊಡನೆ ಆಗ ಬಹುವಾಗಿ ಚರ್ಚಿಸಲ್ಪಡುತ್ತಿದ್ದ ಇಂಗ್ಲೆಂಡ್ ಮತ್ತು ಯೂರೋಪಿನ ಭೂಭಾಗ ಗಳನ್ನು ಸೇರಿಸುವ ಯೋಜನೆಯ ವಿಷಯವನ್ನು ಪ್ರಸ್ತಾಪಿಸಿದೆ. ಇಂಗ್ಲೆಂಡಿನ ಡೋವರ್ ಮತ್ತು ಫ್ರಾನ್ಸಿನ ಕೆಲೆ ಎಂಬ ಊರುಗಳು ಇಂಗ್ಲಿಷ್ ಕಡಲ್ಗಾಲುವೆಯ ಎದುರು ಬದರಿವೆ. ಈ ಎರಡನ್ನೂ ಸೇರಿಸಿ ಇಂಗ್ಲೆಂಡ್ ಮತ್ತು ಯೂರೋಪ್‌ಗಳ ಭೂಸಂಬಂಧವನ್ನು ಮಾಡುವ ಬಗ್ಗೆ ಆಗ ವಿಪುಲ ಚರ್ಚೆಯಾಗುತ್ತಿತ್ತು. ಒಂದು ಒಂದು ತಾಂತ್ರಿಕ ಸಲಹೆಯಂತೆ ಈ ಭೂಭಾಗಗಳನ್ನು ಸೇರಿಸಲು ಸಮುದ್ರದ ಮೇಲೆ ಒಂದು ಸೇತುವೆಯನ್ನ ನಿರ್ಮಿಸಿದರೆ, ಭಾರಿ ವಾಹನಗಳ ಓಡಾಟುವಿಕೆ ಸಾಧ್ಯವಾಗಿ ಇಂಗ್ಲೆಂಡ್ ಮತ್ತು ಯೂರೋಪ್‌ಗಳ ವ್ಯಾಪಾರ ಮತ್ತು ಜನಸಂಪರ್ಕ ಬಹುವಾಗಿ ವೃದ್ಧಿಯಾಗುವುದೆಂಬುದಾಗಿತ್ತು. ಇನ್ನೊಂದು ತಾಂತ್ರಿಕ ಸಲಹೆಯಂತೆ, ಈ ಭೂಭಾಗಗಳನ್ನು ಸೇರಿಸಲು ಸಮುದ್ರದ ಕೆಳಗೆ ಒಂದು ಸುರಂಗವನ್ನು ರಚಿಸ ಬೇಕೆಂಬುದಾಗಿತ್ತು. ಈ ಎರಡೂ ಅಭಿಪ್ರಾಯಗಳ ಪರ ಮತ್ತು ವಿರುದ್ಧ ಬಿರು ಸಾದ ವಾಗ್ವಾದಗಳು ಸತತವಾಗಿ ಆಗುತ್ತಿದ್ದವು. ನನ್ನ ಸ್ನೇಹಿತರು ಸುರಂಗದ ಪಕ್ಷಪಾತಿಗಳಾಗಿದ್ದರು. ನಾನು ಮೆಲುದನಿಯಲ್ಲಿ "ಜಾನ್ ಅವರೇ, ನಾನು ಈ ವಿಷಯವನ್ನು ಆಳವಾಗಿ ಯೋಚಿಸಿದ್ದೇನೆ. ಒಂದು ಪ್ರಮುಖ ಕಾರಣಕ್ಕಾಗಿ ಸುರಂಗದ ಬದಲು ಸೇತುವೆಯ ನಿರ್ಮಾಣವೇ ಸಾಧುವೆಂದು ನನಗೆ ತೋರುತ್ತದೆ" ಎಂದೆ. ನನ್ನ ಸ್ನೇಹಿತರು ಗಂಭೀರವಾಗಿ "ಅದೇನು ಕಾರಣ" ಎಂದರು. ನಾನು "ಸುರಂಗದ ಅಗಲ ಸ್ವಲ್ಪ ಹೆಚ್ಚಾದರೆ, ನಿಮ್ಮ ದೇಶವೇ ಅದರಲ್ಲಿ ಹೊಕ್ಕು ಕಳೆದು ಹೋಗುವ ಸಂಭವವಿದೆ. ಆದ್ದರಿಂದ ಸೇತುವೆಯೇ ಸಾಧುವಾದದ್ದು" ಎಂದೆ. ತಕ್ಷಣವೇ ಪೆಚ್ಚಾದ ಜಾನ್‌ರು, ನನ್ನ ಹಾಸ್ಯದ ಧ್ವನಿಯನ್ನು ಗ್ರಹಿಸಿ ತಾವೂ ಅದರಲ್ಲಿ ಭಾಗಿಯಾದರು.

ಇನ್ನೊಮ್ಮೆ ಅಮೇರಿಕದ ವಾಷಿಂಗ್ಟನ್‌ನ ಕಾಥೋಲಿಕ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದ ನನ್ನ ಅಮೇರಿಕನ್ ಸ್ನೇಹಿತರೊಬ್ಬರು ತಮ್ಮ ವಿಶ್ವವಿದ್ಯಾಲಯದ ಹಿರಿಮೆಯನ್ನು ನನಗೆ ಬಣ್ಣಿಸುತ್ತಿದ್ದರು. "ನಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ದೊಡ್ಡ ಭೂಕಂಪ ಮಾಪನ ಯಂತ್ರವಿದೆ. ಅದು ಅಮೇರೀಕದಲ್ಲಿರುವ ಪ್ರಮುಖ

ಯಂತ್ರಗಳಲ್ಲಿ ಒಂದು. ಅದು ಎಷ್ಟು ಸೂಕ್ಷ್ಮ ವಾಗಿದೆಯೆಂದರೆ, ಪ್ರಪಂಚದ ಯಾವ ಭಾಗದಲ್ಲಿಯಾದರೂ, ಯಾವಪ್ರಮಾಣದ ಭೂಕಂಪವಾದರೂ ನಮ್ಮ ಯಂತ್ರದಲ್ಲಿ ತಕ್ಷಣವೇ ದಾಖಲಾಗುತ್ತದೆ." ಎಂದರು. ನಾನು "ಅದು ಅಷ್ಟು ಸೂಕ್ಷ್ಮದ ಯಂತ್ರವಾದರೆ, ನಿಮ್ಮ ಪೋಪರು ರೋಮಿನಲ್ಲಿ ಕೆಮ್ಮಿದರೆ ನಿಮ್ಮ ಯಂತ್ರ ದಾಖಲು ಮಾಡುವುದೋ" ಎಂದು ಕೇಳಿದೆ, ನನ್ನ ಮಿತ್ರರು ಕ್ಯಾಥೊಲಿಕ್ಕರಾದರೂ ಸಹಿಷ್ಣುಗಳೂ ಹಾಸ್ಯಪ್ರಿಯರೂ ಎಂಬ ವಿಷಯ ನನಗೆ ಗೊತ್ತಿತ್ತು. ಅದರಿಂದಲೇ ಈ ರೀತಿಯ ಹಾಸ್ಯದ ಮಾತಿನ ಧೈರ್ಯಮಾಡಿದೆ. ನನ್ನ ಎಣಿಕೆ ತಪ್ಪಾಗಲಿಲ್ಲ.

ಕಾಯಕಲ್ಪ

ಬಿ.ಎಂ.ಎನ್. ಮೂರ್ತಿ

ರಿಯಾಡ್‌ನಲ್ಲಿದ್ದ ಚಂದ್ರನ್‌ಗೆ ಸದಾ ತನ್ನ ತಂದೆ, ತಾಯಿಯರದೇ ಯೋಚನೆ. ಮಲಬಾರಿನ ಹಳ್ಳಿಯಲ್ಲಿದ್ದ ಈ ವಯಸ್ಸಾದವರನ್ನು ಬಿಟ್ಟು ಹಣದ ಆಸೆಗಾಗಿ ಈ ದೂರದ ಊರಿನಲ್ಲಿ ಸಿಕ್ಕಿಬಿದ್ದಿದ್ದೇನಲ್ಲಾ ಅಂತ ಯಾವಾಗಲೂ ಕೊರಗು ಒಮ್ಮೆ ಅರಾಬಿಕ್ ಪತ್ರಿಕೆಯೊಂದರಲ್ಲಿ ಫಕೀರನೊಬ್ಬ ಕೊಟ್ಟಿದ್ದ ಜಾಹಿರಾತನ್ನು ಓದಿದ. "ಮಾತ್ರೆಗಳಿಂದ ನವ ತಾರುಣ್ಯ" ಎಂಬ ಶೀರ್ಷಿಕೆಯಡಿಯಲ್ಲಿ ಆ ಫಕೀರ ತನ್ನ ಮಾತ್ರೆಗಳ ಶಕ್ತಿಯ ಬಗ್ಗೆ ಬೇಕಾದಷ್ಟು ಜಂಭ ಕೊಚ್ಚಿಕೊಂಡಿದ್ದ. ತನ್ನ ತಂದೆ ತಾಯಿ ಆರೋಗ್ಯವಂತರಾದರೆ ತನ್ನ ಯೋಚನೆ ಕಡಿಮೆಯಾಗಬಹುದೆಂದು ನೆನಸಿ ಚಂದ್ರನ್ ಕೂಡಲೆ ಒಂದು ಬಾಟಲ್ ಮಾತ್ರೆಯನ್ನು ಖರೀದಿಸಿ ಮಲಬಾರಿಗೆ ರವಾನಿಸಿದ.

ಹಲವು ತಿಂಗಳಾದರೂ ತಂದೆ ತಾಯಿಯರ ಸುದ್ದಿಯೇ ಇಲ್ಲ. ಕೊನೆಗೆ ಚಂದ್ರನ್ ರಜೆ ಹಾಕಿ ತಾಯ್ನಾಡಿಗೆ ಮರಳಿದ. ಹಳ್ಳಿಯ ಮನೆಯ ಮುಂದೆ ಒಬ್ಬ ಸ್ಫುರದ್ರೂಪಿ ಯುವತಿ, ಪಕ್ಕದಲ್ಲಿ ಒಬ್ಬ ಚೂಟಿ ಹುಡುಗ ನಿಂತಿದ್ದರು.

ಚಂದ್ರನ್ "ಯಾರಮ್ಮ ನಾವು ?" ಅಂತ ಕೇಳಿದ ಆಕೆ "ಥೂ ಹುಚ್ಚ ನಾನು ನಿಮ್ಮಮ್ಮ ಅಲ್ವೇನೋ. ನೀನು ಕಳಿಸಿದ ಒಂದು ಮಾತ್ರೆ ತಗೊಂಡೆ. ಹೀಗಾದೆ ನೋಡು" ಅಂದಳು.

"ಅಪ್ಪ ಎಲ್ಲಿ ?" ಚಂದ್ರನ್ ಕೇಳಿದ.

"ನಿಮ್ಮಪ್ಪ ಗೊತ್ತಲ್ಲ ಯಾವಾಗ್ಲೂ ದುರಾಶೆ ಸ್ವಭಾವ. ಎರಡು ಮಾತ್ರೆ ತಗೊಂಡ್ಬಿಟ್ರು. ಈಗ ನೋಡು" ಅಂತ ಹುಡುಗನ ಕಡೆ ಬೊಟ್ಟು ಮಾಡಿದಳು. ಹುಡುಗ ಹಲ್ಲು ಕಿರಿದ. ಅಷ್ಟರಲ್ಲಿ ಮನೆಯೊಳಗಿಂದ ಒಂದು ಎಳೇ ಮಗು ರಚ್ಚೆ ಹಿಡಿದು ಅಳಲು ಪ್ರಾರಂಭಿಸಿತು.

ಚಂದ್ರನ್ "ಅಜ್ಜೀ" ಎಂದು ಕೂಗುತ್ತ ಒಳಗೋಡಿದ.

ನಮ್ಮ ಮನೆಯ ಸಣ್ಣ ಪಾಪ

(ಬೇಂದ್ರೆಯವರ ಕ್ಷಮೆ ಬೇಡಿ)

ಧೃತಿ

ಓರ್ವತಾಯಿಯು ತನ್ನ ಅಡುಗೆಯ ಮನೆಯಲ್ಲಿ
ಅಡುಗೆಯನು ಮಾಡುತಿಹಳೋ
ಸರ್ಕಾರದಾಸ್ಪತ್ರೆಯಲಿ ಹುಟ್ಟಿದಾ ಪುಟ್ಟ
ಪಾಪನ್ನ ಆಡಲಿಕೆ ಬಿಟ್ಟಿರುವಳೋ ಓ ಓ

ನೆಲದಲ್ಲಿ ಆಡಿಕೊಂಡಿರಲೊಲ್ಲದೆ ಪಾಪ
ಅಳುವುದಕೆ ಆರಂಭಿಸಿಹುದಲ್ಲವೋ
ಕೆಲಸಮಾಡುವ ಅಮ್ಮ ಮೇಲೆತ್ತಿಕೊಳ್ಳದಿರೆ
ಬಲುಕೋಪ ಬಹುದದಕೆ ಹೋ....ಹೋ ..

ಕೋಪಗೊಳ್ಳುವ ಪಾಪ ತನ್ನ ಮೈಯನ್ನೆಲ್ಲ
ಪರಪರನೆ ಪರಚುತ್ತ ಅಳುತಿರುವುದೋ
ಹುಚ್ಚು ಹಿಡಿಸುವ ಅದರ ಅಳುಬುರುಕುತನದಿಂದ
ಅಮ್ಮನಿಗೆ ಬಹು ಅಳುವೆ ಬರುವುದೈ ಓ ..

ಅಡುಗೆಯ ಮನೆಯ -ಲ್ಲಿದ್ದ ಅಮ್ಮನು ಬಂದು
ಎದೆಗೊತ್ತಿ ಲಲ್ಲೆ ಗರೆಯುತಿಹಳೋ
ಹುಟ್ಟುತ್ತಲೇ ಕಿರುಚಿ ಪರಚುತ್ತಲೇ ಬೆಳೆದು
ಮೊಂಡುಹಟ ಹಿಡಿಯುತಿಹ ಮಗುವೇ ಹೋ

ಯಾಕಿಷ್ಟು ಅಳುತಿರುವೆ ನಾ ಬಂದೆ ಸುಮ್ಮನಿರು
ಎನುತ ಸಂತೈಸಿ ಮೈ ದಡವುತಿಹಳೋ
ಪಾಪನ್ನ ಬಿಗಿದಪ್ಪಿ ಕಣ್ಣುಗಳ ನೀರೊರಸಿ
ಅಯ್ಯೊ ಪಾಪ ಎನುತ ಮುತ್ತಿಡುವಳೋ ಓ ...

ಪಾಪ ಹಿಡಿದಾ ಹಟಕೆ ಬೆಲೆ ಬಂದು ಅದರಳುವು
ಸಾರ್ಥಕಾಯಿತು ತಾಯೆ ಓ ಓ
ಕಿರಿಚುವುದು ಪರಚುವುದು ಅಳುವುದೇತಕೆ ಎಂದು
ಅರ್ಥವಾಯಿತು ಮಗುವೆ ಹೋ....ಹೋ....

31

ಪುಢಾರಿಗಳಿಗೆ ಸ್ಟ್ರೇ ಸ್ಟ್ರೈಟ್

ಬಿ. ಎಂ. ಜೋಷಿ

ರಾಜಕೀಯ ಚದುರಂಗದಾಟಕ್ಕೆಂದು ಪ್ರಸಿದ್ಧಿ ಹೊಂದಿದ ದೇಶ- ಹಾಗಲ್ವಾಡಿ ಸಂಸ್ಥಾನ. ತಿಂಗಳಿಗೊಂದು ಮಂತ್ರಿಮಂಡಳ ಉರುಳಿ ಮತ್ತೊಂದರ ರಚನೆ ಆದಕ್ಕಾಗಿಯೇ ಹೊಸ ಹೊಸ ಪಕ್ಷಗಳ ರಚನೆ. ರಾಷ್ಟ್ರಾಧ್ಯಕ್ಷ ಅರ್ಥಾತ್ ಮಹಾ ರಾಜಾ ಸಂಪಂಗಿ ಸಿಂಹನಿಗೆ ದಿನವಿಡೀ ಇವರ ಜಗಳ ತಿರ್ವಾನ, ಹೊಸ ಸಂಪುಟದ ದೀಕ್ಷಾ ಸಮಾರಂಭವನ್ನು ನಡೆಸಿ ಕೊಡುವುದು ಇದರಲ್ಲಿಯೇ ಕಾಲ ಕಳೆಯುತ್ತಿತ್ತು. ಇನ್ನು ವರ್ಷಕ್ಕೊಮ್ಮೆ ಯಾವ ಪಾರ್ಟಿಯೂ ನಿಚ್ಚಳ ಬಹುಮತದಿಂದ ಆರಿಸಿ ಬರದಿದ್ದರೆ ಅಥವಾ ಸರ್ಕಾರ ರಚಿಸಲು ಬಹುಮತದ ಪಾರ್ಟಿ ಇಲ್ಲದಿದ್ದರೆ ಪುನಃ ಚುನಾವಣೆ. ಹೀಗಾಗಿ ಸರ್ಕಾರದ ಬೊಕ್ಕಸ ಖಾಲಿಯಾಯಿತು. ಸರ್ಕಾರದ ಕೆಲಸವೆಲ್ಲ ಇಷ್ಟಕ್ಕೆ ಸೀಮಿತವಾಯಿತು. ಜನರು ತೆರಿಗೆಯ ಹೊರೆ ಹೊರಲಾರದವ ರಾದರು.

ಇಂತಹ ಅವಕಾಶವನ್ನೇ ಎದುರು ನೋಡುತ್ತಿದ್ದ ಸೈನ್ಯಾಧಿಕಾರಿ ಜನರಲ್ ಶಂಭು, ಒಂದು ರಾತ್ರಿ ಬೆಳಗಾಗುವುದರೊಳಗೆ ರಕ್ತ ರಹಿತಕ್ರಾಂತಿಮಾಡಿ, ಮಹಾ ರಾಜಾ ಸಂಪಂಗಿಸಿಂಹನನ್ನೂ ಅವನ ಮಂತ್ರಿಮಂಡಲವನ್ನೂ ತಳ್ಳಿ ಕಾರಾಗೃಹಕ್ಕೆ ಹಾಕಿ ಎಲ್ಲಾ ರಾಜಕೀಯ ಪಕ್ಷಗಳನ್ನು ನಿಷೇಧಿಸಿ- ಎಲ್ಲಾಪುಢಾರಿಗಳನ್ನು ತಂದು ಊರ ಹೊರಗಿನ ಕಾರಾಗೃಹದಲ್ಲಿ ಭರ್ತಿಮಾಡಿಸಿದ.

ಆದರೆ ಕೆಲವೇ ಸಮಯದಲ್ಲಿ ಸುದ್ದಿ ಬಂತು. "ಜೈಲಿನೊಳಗೂ 'ಜೈ' ಕಾರ ನಡೆಯುತ್ತಿದೆ. ಅಲ್ಲೂ ರಾಜಕೀಯ- ಸಂಚು "ದಿನಬೆಳಗಾದರೆ, ತಿಕ್ಕಾಟ, ಹೊಡೆ ದಾಟ- ಭಾಷಣ ಉಪವಾಸ ಸತ್ಯಾಗ್ರಹ, ಪ್ರತಿಭಟನೆ ಸಭಾತ್ಯಾಗ ಇವುಗಳಿಂದ ಜೈಲಿನ ಕಾವಲುಗಾರರಿಗೆ ಖಾಹಿಲೆ ಬರಲಾರಂಭಿಸಿದೆ ಜನರಲ್ ಸಾಹೇಬರೆ"

ಜನರಲ್ ಶಂಭು ತನ್ನ ಆಪ್ತರೊಂದಿಗೆ ಸಮಾಲೋಚಿಸಿ ಒಂದು ಹುಕುಂಗೆ ಸಹಿಮಾಡಿದ "ರಾಜಕೀಯ ಖೈದಿಗೆಳೆಲ್ಲರನ್ನೂ ಗುಂಪಾಗಿ ಎಳೆದೊಯ್ದು ಊರ ಹೊರಗಿನ ಸ್ಮಶಾನದಲ್ಲಿ ಜೀವ ಸಹಿತ ಹೂತುಹಾಕಿ- ಗುಂಡು ಹಾಕಿಕೊಂಡು, ರಾಜ್ಯಕ್ಕೆ ಇನ್ನಷ್ಟು ನಷ್ಟ ಮಾಡುವ ಆವಶ್ಯಕತೆ ಇಲ್ಲ"

ಅಂತೆಯೇ ಎಲ್ಲರನ್ನು ದರ–ದರನೆ ಎಳೆದು ತಂದು ಸಾಲಾಗಿ ಬಿಸಿಲಿನಲ್ಲಿ ನಿಲ್ಲಿಸಿದರು. ಇನ್ನೇನು ಸ್ಮಶಾನದಲ್ಲಿ ಕುಣಿತೆಗೆಯಲು ಆರಂಭಿಸಿದ್ದೇ ತಡ ಪಕ್ಕದ ಗೋರಿಯಿಂದ ಒಂದು ಪ್ರೇತ ಎದ್ದು ಬಂದು ಅಂಗಲಾಚಿ ಬೇಡಿಕೊಳ್ಳಲಾರಂಭಿಸಿತು. ಆದರ ಜತೆಗೇ ಅಲ್ಲಿದ್ದ ಅಷ್ಟೂ ಗೋರಿಗಳಿಂದ ಪ್ರೇತಗಳೆದ್ದು ದೊಡ್ಡ ಪ್ರತಿಭಟನೆಯನ್ನೆ ಮಾಡಲಾರಂಭಿಸಿ, ತಮ್ಮ ಮನವಿಯನ್ನು ಸಲ್ಲಿಸಿದವು.

ಜನರಲ್ ಶಂಭು ಖುದ್ದಾಗಿ ಬಂದು ವಿಚಾರಿಸಿದ ಪ್ರೇತಗಳ ಮುಂಖಂಡ ಬೇಡಿಕೊಂಡಿತು.

"ಅಯ್ಯಾ ಜನರಲ್‌ಸಾಹೇಬ–ನಿಮ್ಮ ದಮ್ಮಯ್ಯ–ಈ ರಾಜಕೀಯ ವ್ಯಕ್ತಿಗಳನ್ನು ಇಲ್ಲಿ ಹೂಳ ಬೇಡಿರಿ. ಈ ಜಾಗ ನಮ್ಮದು ಜಮಾನದಿಂದ ನಾವು ಈ ಸ್ಥಳದಲ್ಲಿ ಚಿರಶಾಂತಿಯನ್ನು ಅನುಭವಿಸುತ್ತಿದ್ದೇವೆ. ಈ ಬಿಕನಾಶಿಗಳು ಇಲ್ಲಿದ್ದರೆ ನಮ್ಮ ಶಾಂತಿಗೆ ಭಂಗ ಬರುತ್ತದೆ"

"ಹಾಗಾದರೆ ಇವರನ್ನೆಲ್ಲಿ ಹೂಳಲಿ ?" ಜನರಲ್ ಶಂಭು ಗುಡುಗಿದ. ಸ್ವಲ್ಪ ಯೋಚಿಸಿ. ಪ್ರೇತನಾಯಕನೆಂದ "ಜನರಲ್‌ಸಾಹೇಬ್ ಈ ನಾಲಾಯಖ್‌ಗಳನ್ನು, ತುಂಬಾವಾಹನಗಳೂ, ಮನುಷ್ಯರೂ ಹಗಲು ರಾತ್ರಿ ಓಡಾಡುವ ಹೆದ್ದಾರಿಯ ಜಂಕ್ಷನ್‌ನಲ್ಲಿ ಹೂಳಿಸಿರಿ"

ಜ || ಶಂಭುವಿಗೆ ಈ ಸಲಹೆ ಅತ್ಯುತ್ತಮವೆನಿಸಿ, ತನ್ನ ಹುಕುಂ ನಾಮವನ್ನು ತಿದ್ದಿಸಿ ಜಾರಿ ಮಾಡಿದ.

ಹಗೆತನ

ವೇಣುಗೋಪಾಲ ಸೊರಬ

ಶರ್ಮಾಜಿ ಮತ್ತು ವರ್ಮಾಜಿ
ವ್ಯವಹಾರ ಪ್ರಾರಂಭಿಸಿದರು
ಇಬ್ಬರೂ ಕೂಡಿ ಲೇವಾದೇವಿಯನ್ನು
ಪ್ರೀತಿಯಿಂದ ಚುಂಬಿಸಿದರು
ಕೊನೆ ಕೊನೆಗೆ ತಮ್ಮ
ಹಗೆತನವನ್ನು
ಲಂಬಿಸಿ, ಲಂಬಿಸಿ, ಲಂಬಿಸಿದರು.

ನಾನೂ ಯೋಗಾರ್ಥಿಯಾದೆ

ಶ್ರೀಮತಿ ಅರುಣಾ ಆರ್. ಕಾರಂತ್

ದೇವರು ದಿಂಡರು
ಮೌನದ ದನಿಗಳು
ಆಧ್ಯಾತ್ಮದ ಹನಿಗಳು
ಸಂಜೀವನಿಗಳು
ಎಲ್ಲ ಬ್ರಾಂಡಿನ ಅಮೃತದ
ಗುಟುಕುಗಳೆಲ್ಲವು ಇಲ್ಲಿದೆ
ಬರೇ ಕೇವಲ 250ಕ್ಕೆ..........ಬನ್ನಿ ಬನ್ನಿ ಬನ್ನಿ

ಒಂದು ಸಂಜೆ ರವಿ ಬಂದವನೇ ಹೇಳಿದ "ಅಕ್ಕಾ, ನೀವು ನಮ್ಮ ಯೋಗಾ ಕ್ಲಾಸಿಗೆ ಸೇರಿ, ಕಾಲುನೋವು ಅಂತಿದ್ರಲ್ಲ ಎಲ್ಲ ಕಡಿಮೆಯಾಗ್ತದೆ. ನಮ್ಮ ತಂದೆಯವರೂ ಸೇರಿದ್ರು. ಈಗ ಸಿಟ್ಟು ಟೆನ್ಶನ್ ಕಾಲುನೋವು ಏನೂ ಇಲ್ಲ, ಸಾಗರದಲ್ಲಿ ನಾಳೆ ಶನಿವಾರದಿಂದಲೇ ಸುರು ಆಗ್ತದೆ" ಎಂದ. ನಮ್ಮವರು ತಕ್ಷಣವೆ ಅವನ ಬಳಿ ಸ್ಕೂಲಿನ ಫೀಸ್ ಕೊಟ್ರು.

ಶನಿವಾರ ಬಂತು. ನಾನು ಮನೆಯವರೊಡನೆ ಜಂಬದಿಂದಲೇ ಕ್ಲಾಸಿಗೆ ಹೋದೆ. ಗುರೂಜಿ ಅವರ ಶಿಷ್ಯವರ್ಗ, ತಮಗೆ ಶಿಬಿರಾರ್ಥಿಯಾದುದರಿಂದ ಸ್ವರ್ಗವೇ ಸಿಕ್ಕಿದೆ. ಎಲ್ಲ ನೋವು ಯಾತನೆಗಳಿಂದ ಮುಕ್ತರಾಗಿದ್ದೇವೆ. ಎಲ್ಲೆಲ್ಲೂ ಶಾಂತಿ ಸಂತಸ, ಹಗುರಾದ ಭಾವನೆ ಕಾಣ್ತಿದೆ. ಎಂದೆಲ್ಲ ಹೇಳಿದರು. ನಮ್ಮವರಿಗೆ ಬರೇ 250ರೂಪಾಯಿಗಳಿಗೆ ಸ್ವರ್ಗ ಸಿಗುತ್ತದಲ್ಲ ಎಂದು ಹಿಗ್ಗೇ ಹಿಗ್ಗು, ತಾನೂ ಸೇರಬೇಕಿತ್ತು ಎಂದುಕೊಂಡರು. ಟೈಮ್ ಸ್ಯೂಟ್ ಆಗಲ್ವಲ್ಲ ಎಂದು ಕೈ ಕೈ ಹಿಸುಕಿಕೊಂಡರು.

ಸೋಮವಾರ ಸಂಜೆ 6 ಕ್ಕೆ ಕ್ಲಾಸ್ ಸುರುವಾಯಿತು. ಎಲ್ಲರೂ 'ಓಂ' ಎನ್ನುವಾಗ ಏನೋ ಆಗ್ತದೆ, ಸ್ವರ್ಗದ ಬಾಗಿಲು ತೆರೆಯುತ್ತದೆ ಎಂದು ಕಾತರಿಸಿದೆ. ಜಡಿಮಳೆಯ ನಂತರದ ಮೌನದಿಂದ ಗುರೂಜಿ ಸುತ್ತ ಅವಲೋಕಿಸುತ್ತ ಅಪ್ಪಣಿಸಿದರು. "ನೀವೆಲ್ಲ ಅಜ್ಞಾನಿಗಳು. ಇಲ್ಲಿ ಎಲ್ಲ ಮರೆತು ಬನ್ನಿ ನಾವು ನಿಮಗೆ ಜ್ಞಾನ ಹಂಚ್ತೇವೆ.

ನೀವು 100% ಈ ತರಬೇತಿಯಲ್ಲಿ ಇನ್ವಾಲ್ವ್ ಆದರೆ ನಿಮಗೆ ಸಮಾಧಿ ಸಾಧನೆ ಆಗ್ತದೆ. ಇದು ಬಹಳ ಸುಲಭ, ಸುಲಭ ಸುಲಭ". ಪರಿಚಯ ಮುಗಿಯಿತು. ಭಜನೆ, ಆರತಿ ಮತ್ತೆ ಓಂಕಾರದ ಹೂಂಕಾರ.

ಮರುದಿನ ಕ್ಲಾಸಿನಲ್ಲಿ ಇಷ್ಟುದಿನ ಅಜ್ಞಾನಿಗಳು ಎನ್ನುವ ಶಬ್ದ ಉಪಯೋಗಿಸಿದ್ದಾಯ್ತು. ಇನ್ನು 'ಕತ್ತೆ' ಎನ್ನುವ ಶಬ್ದ ಉಪಯೋಗಿಸ್ತೀವೆ ಎಂದು ಠರಾಯಿಸಿದರು. ಗುರೂಜಿ, ಎರಡನೇ ದಿನ 'ಟೇಪ್ ರಿಕಾರ್ಡ್'ನಿಂದ ಗುರುವಾಣಿ ನುಡಿಯಿತು. ಗುರೂಜಿ ಅದನ್ನು ವ್ಯಾಖ್ಯಾನಿಸಿದರು. ಅವರ ಅರ್ಥಹೀನ ಬರಡು ಭಾಷಣ ಬೋರಾಗತೊಡಗಿತು. ನಾನು ನೋಟುಬುಕ್ಕು ತೆಗೆದು ಬರೆಯಲು ಪ್ರಯತ್ನಿಸಿದೆ. "ಏನು, ಪುಸ್ತಕ ಮುಚ್ಚಿ, ನಿಮಗೆ 'ಕತ್ತೆ' ಅನ್ಬೇಕಾಗ್ತದೆ. ನಾನು ಅಜ್ಞಾನಿ ಆಗೇ ಇರ್ತೀನಿ ಅನ್ನೋರಿಗೆ ಏನನ್ಬೇಕು. ನೀವು ಇಲ್ಲಿ ಏನೂ ಬರ್ಕೊಳ್ಳ ಕೂಡದು. ನಾವು ಹೇಳಿದ್ದು ನಿಮ್ಮ ಮಸ್ತಿಷ್ಕದಲ್ಲಿ ಬರ್ಕೊಬೇಕು ಅಷ್ಟೆ." ಗುಡುಗುಡಿಸಿದರು ಗುರೂಜಿ. ರಾತ್ರಿ 9–20 ಆದರೂ ತರಗತಿ ಮುಗಿಯುವ ಸೂಚನೆ ಇಲ್ಲ 9-30 ಘಂ. ಗೆ ನಮ್ಮೂರಿಗೆ ಕೊನೆಯ ಬಸ್ಸು ಇನ್ನು 5–10 ನಿಮಿಷಗಳೂ ಇಲ್ಲ. ಕರೆದೊಯ್ಯಲು ಬಂದ ನಮ್ಮ ಮನೆಯವರು ಹೊರಗೆ ಶತಪಥ ಹಾಕ್ತಾ ಇದ್ದರು. ಗುರೂಜಿಯವರ ಬಳಿ ಹೋಗಿ ಟೈಮಾಗ್ತಿದೆ ಎಂದೆ ನೀವೆ ಮಾಡ್ಕೊಂಡ ನಿಯಮ ನನ್ಗೆತ್ತೀನು ಹೇಳ್ತೀರಿ ?". ಎಂದರು "ಮನೇಲಿ ಸಣ್ಣ ಹುಡುಗರಿದ್ದಾರೆ ಬಸ್ಸು ತಪ್ತದೆ" ಎಂದೆ. ಅವರು ಮೇಲೆ ಕೈ ಮಾಡಿ 'ಅವನು ನೋಡ್ಕೊತಾನೆ' ಎನ್ನುವಂತೆ ಸಂಜ್ಞೆ ಮಾಡಿದರು. ನನಗೋ ಅಳು ಬರೋದೆ ಬಾಕಿ.' ನಮ್ಮ ಮನೆಯವರು ಒಳಗೆ ಬಂದರೆ, ಎಂಬ ಭಯ. ಮೊದಲೇ ವಿಶ್ವಾಮಿತ್ರರು,' ಬಸ್ಸು ತಪ್ಪಿದರೆ ಗುರುಗಳಿಗೆ ಸರಿಯಾಗಿ ನೀರಿಳಿಸ್ತಾರೆ ಎಂದೆನ್ನಿಸಿತು. ಅಂತೂ ಇಂತೂ ಗುರುಗಳ ಕಡೆಯಿಂದ ಅನ್ನಿಸಿಕೊಂಡು ಹೊರ ಬಂದು ನಮ್ಮೂರಿಗೆ ಕೊನೆಯ ಬಸ್ಸಿನಲ್ಲಿ ಕೊನೆಯ ಪ್ಯಾಸೆಂಜರಾಗಿ ರಶ್‌ನಲ್ಲಿ ಒಂಟಿ ಕಾಲಿಟ್ಟು ಪಯಣಿಸಿ ಮನೆಮುಟ್ಟಿದಾಗ ನಾಳೆಯಿಂದ ಕ್ಲಾಸಿಗೆ ಹೋಗಲೇಬಾರದು ಎನ್ನಿಸಿತು. "ಹೇಗೂ 250ರೂಪಾಯಿ ಕೊಟ್ಟಿದ್ದೀಯಾ ಇನ್ನು ಕೆಲದಿನ ಅಷ್ಟೆ. ಪ್ರಾಣಾಯಾಮ ಸಮಾಧಿಗಳನ್ನು ಪ್ರಾಕ್ಟಿಕಲ್ ಆಗಿ ಹೇಗೆ ಮಾಡುವುದು ಅನ್ನೋದನ್ನ ತೋರಿಸ್ತಾರಾ ನೋಡು" ಎಂದರು ಮನೆಯವರು.

ಶಿಬಿರಾರ್ಥಿಗಳಲ್ಲಿ 20–25 ವಯಸ್ಸಿನವರಿಂದ 40–50 ವರ್ಷದವರೂ ಇದ್ದರು. ಮಾತಾಜಿಯವರು (ಗುರೂಜಿಯವರು) ಒಂದಲ್ಲ ಒಂದು ಸಂದರ್ಭದಲ್ಲಿ ಒಬ್ಬರಲ್ಲ ಒಬ್ಬರಿಗೆ 'ಕತ್ತೆ' ಪದ ಪ್ರಯೋಗಿಸಿದಾಗ ಎಲ್ಲರಿಗೂ ಇರಿಸು ಮುರಿಸು. ಒಂದುವಾರದ ತರಬೇತಿಯ ನಂತರ ಅದೊಂದು ಭಾನುವಾರ Clean India

Programme ಬೆಳಿಗ್ಗೆ 6–30ಕ್ಕೆ Fun game ಎನ್ನುವ ಹುಚ್ಚಾಟದ ನಂತರ ರಸ್ತೆ ಗುಡಿಸುವುದಕ್ಕೆ ಹೊರಡುವುದೆಂದಾಯ್ತು. ಎಲ್ಲರೂ ಬಕೆಟ್, ಬುಟ್ಟಿ, ಕಸಬರಿಗೆ ಸಹಿತ ಗ್ರೌಂಡ್ ಸೇರಿದೆವು. "ಹರಹರ ಮಹಾದೇವ್" ಎಂದು ಎಲ್ಲರೂ ಒಟ್ಟಿಗೆ ಕಿರುಚಿದಾಗ ಮೇಯುತ್ತಿದ್ದ ಎರಡು ಕುದುರೆಗಳು ಓಟಕಿತ್ತುವು. Clean India ಕಾರ್ಯಕ್ರಮ ಮುಗಿಸಿ 11–30ಕ್ಕೆ ಪರಿಚಿತರ ಮನೆ ತಲುಪಿ ಸ್ನಾನ ಮಾಡಿ ತಿರುಗಿ ಬಂದಾಗ ಹೊಟ್ಟೆ ತಾಳ ಹಾಕುತ್ತಿತ್ತು. ಮಧ್ಯಾಹ್ನ ಹಸಿತರಕಾರಿ ಭುಂಜಿಸಿ ಗುರೂಪದೇಶಕ್ಕೆ ಕುಳಿತಾಗ ತಲೆತಿರುಗಿ ಬಸವಳಿದು ಕುಸಿದಿದ್ದೆ. ಅಷ್ಟೊತ್ತಿಗೆ ನನ್ನ ಅರೆ ಪ್ರಜ್ಞಾವಸ್ಥೆಯಲ್ಲಿ ಗುರೂಪದೇಶ ಮುಗಿದು ಸಾಮೂಹಿಕ ಭಜನೆ ಪ್ರಾರಂಭವಾಗಿತ್ತು. ಶಿಬಿರಾರ್ಥಿಗಳು ತಾಳ, ಚಿಟಿಕೆ ಹಿಡಿದು ಚಪ್ಪಾಳೆ ತಟ್ಟಿ ಗಂಡು ಹೆಣ್ಣುಗಳೆಲ್ಲ ಒಟ್ಟಾಗಿ ಕುಣಿವ ಭೀಷಣ ಗದ್ದಲ ಕೇಳಿ ಗಾಬರಿಯಾದಂತಾಯಿತು. ಅಂತೂ ಈ ಸದ್ದು ಗದ್ದಲದಿಂದ ಹೊರಬಿದ್ದು ಮನೆಸೇರಬೇಕಾದರೆ ಸಾಕುಸಾಕಾಯ್ತು.

ಮರುದಿನ ಮತ್ತೆ ಶಿಬಿರದಲ್ಲಿ ಆಹಾರದ ಬಗೆಗೆ ಗುರೂಜಿಯಿಂದ ವ್ಯಾಖ್ಯೆ 'ಹಾಲ್ಕುಡಿಬಾರ್ದು, ಉಳ್ಳಾಗಡ್ಡೆಯಲ್ಲಿ ನೆಗೆಟಿವ್ (–ve) ಪ್ರಾಣಶಕ್ತಿ ಇದೆ. ಟೊಮ್ಯಾಟೊ, ಆಲೂಗಡೆ, ಬದನೆಕಾಯಿಯಲ್ಲಿ ಏನೂ ಇಲ್ಲ. ಬೂದುಗುಂಬಳ ಕಾಯಿಯಲ್ಲಿ ಮಹಾಶಕ್ತಿ ಇದೆ. ಚಾಯಲ್ಲಿ ಟ್ಯಾನಿನ್ ಇರುತ್ತೆ ಹಾರ್ಟ್ ಗೊತ್ತಲ್ಲ ಅಲ್ಲಿ ಅಡ್ರಿನಾಲಿನ್ ಇರುತ್ತೆ. ನೀವು ನಿಮ್ಮ ವಿಚಾರ ಬಿಟ್ಬು ನಾವು ಹೇಳಿದ್ದನ್ನ ಕೇಳಿ, ಇತ್ಯಾದಿ ಅವರು ಹೇಳಿದ್ದನ್ನು ಕೇಳ್ತಾನೆ ತಲೆ ಕೆಡ್ಲಿಕ್ಕೆ ಹತ್ತಿತ್ತು. ಪೂರ್ತಿ ಕೇಳಿದರೆ ಇದ್ದಬಿದ್ದ ಯೋಚನಾಶಕ್ತಿಯೂ ಹೊರಟರೆ ... ? ಅನ್ನಿಸಿತು.

ಮರುದಿನ ಶಿಬಿರದಲ್ಲಿ ಮನೆಪಾಠದ ಕುರಿತು ಚರ್ಚೆ. "sharing" ಅಂತ ನಾನು Positive(+ve) thinking ನಿಂದ ಏನನ್ನೂ ಸಾಧಿಸಬಹುದು ಎಂದೆ. ಮತ್ತೊಬ್ಬ ಶಿಬಿರಾರ್ಥಿ ಇಲ್ಲೀತನಕ ಶಿಬಿರಾರ್ಥಿಗಳ ಮೇಲೆ ಪ್ರಯೋಗಿಸಿದ ಬೈಗಳಗಳಿಗೆ ಪ್ರತಿಯಾಗಿ "ಮಾಡ್ತೀನಿ ಅಂದ್ಕಂಡ್ರೆ ಆಗುತ್ತೆ ಇಲ್ಲಾಂದ್ರ ಅವರು ಕತ್ತೆಗಳು ಬರೇ ಕತ್ತೆಗಳು. ಅಂದ, ಗುರೂಜಿಯವರ ಮುಖ ಬಿಳಿಚಿತು. ನಂತರ ಗುರೂಜಿ ಅಂದರ ನಾಳೆ ಗುರುಪೂಜೆ ಇದೆ. ಆರತಿ ತಟ್ಟೆಯಲ್ಲಿ ನೀವು ಕಾಣಿಕೆ ಹಾಕ್ಬೇಕು. ಯಾರೂ ಎಷ್ಟ ಬೇಕಾದ್ರೂ ಕಾಣಿಕೆ ಹಾಕ್ಬಹುದು Tape Recorder ನುಡಿಯಿತು. "ನೀವೇನು ಕೊಟ್ಟರೂ ಸಾಲದು. ನಮ್ಮ ಕಾರ್ಯಕ್ರಮಕ್ಕೆ, ನಮ್ಮ ಯೋಜನೆಗೆ ನಿಮ್ಮೆಲ್ಲರ ನೆರವುಬೇಕು. ನಾವು ನಿಮಗೆ ಕೊಟ್ಟ ಜ್ಞಾನವನ್ನು ಎಲ್ಲರಿಗೂ ಹಂಚಬೇಕು. ನೀವು ನಿಮ್ಮ ಮನೆಯವರನ್ನು ನೆರೆಯವರನ್ನು ಇಲ್ಲಿಗೆ

ಬರುವಂತೆ ಪ್ರೇರೇಪಿಸಿ ಎಲ್ಲರಿಗೂ ಬರೆ 250ರೂಪಾಯಿಗಳಲ್ಲಿ ಅಮೂಲ್ಯಜ್ಞಾನ ಸಂಪಾದಿಸುವ ಅವಕಾಶ ಮಾಡಿಕೊಡಿ ಶಿಬಿರಾರ್ಥಿ, ಹೊರಗೆ ಇಲ್ಲಿನ ಯಾವ ವಿಷಯವನ್ನೂ ಹೇಳಕೂಡದು. ಇದು ಗುರುವಾಜ್ಞೆ, ಹಾಗಿಲ್ಲದಿದ್ದರೆ ನಿಮಗೆ ಶಿಬಿರದ ಪೂರ್ಣಫಲ ಸಿಗದು. ಜ್ಞಾನ ಸಂಪಾದನೆ ನಮ್ಮ ಬಳಿಯಲ್ಲಿ ಬಹಳ ಸುಲಭ, ಸುಲಭ, ಸುಲಭ, ಕ್ಯಾಸೆಟ್ ಮುಂದುವರೆದಿತ್ತು. ಇನ್ನೂ ಕುಳಿತಿರಲಾರದೆ ಹೊರಟೆ, ಮನೆಯವರೊಡನೆ ನೇರ ಆಯಿಸ್ ಕ್ರೀಮ್ ಅಂಗಡಿಗೋಡಿದೆ.

ಸಂಭಾಷಣೆ ! ! !

ಎಚ್. ಗವಿಸಿದ್ದಯ್ಯ

ಲಾಟರಿ ಮತ್ತು ಸಾರಾಯಿ ಒಮ್ಮೆ ಭೇಟಿಯಾದವು. ಉಭಯ ಕುಸಲೋಪರಿಯ ನಂತರ ತಂತಮ್ಮ ಪರಾಕ್ರಮಗಳನ್ನು ಈ ರೀತಿ ಕೊಚ್ಚಿ ಕೊಂಡವು.

"ನಾನು ನಿನಗಿಂತ ದೊಡ್ಡವನು. ಮನುಷ್ಯರಿಗೆ ಮತ್ತೇರಿಸಿ ಕೊಲ್ಲುವೆನು ಆಗುವವು ನೋಡಾಗ; ಅನೇಕ ಸಂಸಾರಗಳು ನದೀಪಾಲು" ಎಂದಿತು ಸಾರಾಯಿ ಜಂಭದಿಂದ.

"ನಾನು ನಿನಗಿಂತ ಕಡಿಮೆಯಿಲ್ಲ. ಮನುಷ್ಯರಿಗೆ ಹುಚ್ಚೇರಿಸಿ ಕೊಲ್ಲುವೆನು. ಆಗುವವು ನೋಡಾಗ, ಅನೇಕ ಸಂಸಾರಗಳು ಬೀದೀಪಾಲು "ಎಂದಿತು ಲಾಟರಿ ಹೆಮ್ಮೆಯಿಂದ. ಈ ಸಂಭಾಷಣೆಯನ್ನು ಕೇಳಿ. ಜೀವಂತ ಮನುಷ್ಯನನ್ನೇ ನಿಧಾನವಾಗಿ ಸುಡುವಲ್ಲಿ ನನ್ನ ಪಾತ್ರವೇ ಜಾಸ್ತಿ; ಎಂದು ರೈಲ್ವೇ ಎಂಜಿನ್ನಿನಂತೆ ಹೊಗೆಬಿಡುತ್ತ; ಧೂಮಪಾನ ಯೋಚಿಸುತ್ತಿದ್ದಾಗ; "ಮನುಷ್ಯನನ್ನು ನಾಶಗೈಪಲ್ಲಿ ನಮ್ಮ ಪಾತ್ರವೂ ಸಹ ಹಿರಿದು "ಎಂದು ಇಸ್ಪೀಟ್ ಎಲೆಗಳು ಪಕಪಕನೆ ನಗುತ್ತಿದ್ದಾಗ; "ನಾನೂ ಸಹ ಕಮ್ಮಿಯಿಲ್ಲ", ಎಂದು ಕುದುರೆ ಜೂಜು ಲಯಬದ್ಧವಾಗಿ ತಾಳಹಾಕುತ್ತಿತ್ತು.

ಓದುಗರ ಪ್ರತಿಕ್ರಿಯೆ

ಮಾನ್ಯರೇ,

ಅಪರಂಜಿ ಬಗ್ಗೆ ಕೆಲವು ಸಲಹೆಗಳು

೧) ಮುದ್ರಣ ದೋಷಗಳನ್ನು ತಪ್ಪಿಸಿ. ಆಭಾಸಗಳಿಂದುಂಟಾದ ಹಾಸ್ಯ ಬೇಡ.

೨) ಪುಟಗಳನ್ನು ಹೆಚ್ಚಿಸಿ. ಅದಕ್ಕೆ ತಕ್ಕಂತೆ ಬೆಲೆಯನ್ನಿಡಿ.

೩) ಹಾಸ್ಯ ಕತೆಗಳು, ಚುಟುಕಗಳು, ಮಿನಿ ಕತೆಗಳೂ ಬೇಕು.

೪) ನಗೆ ಬರಹಗಾರರನ್ನು ಓದುಗರಿಗೆ ಪರಿಚಯಿಸಿ. ಸಂಚಿಕೆಯಲ್ಲಿ ಕನಿಷ್ಠ ಒಬ್ಬೊಬ್ಬರ ಫೋಟೊ, ವಿಳಾಸ, ವಿವರ ಪ್ರಕಟಿಸಿ, ನಮ್ಮ ಕೃತಜ್ಞತೆಗೆ ಪಾತ್ರರಾಗಿ.

೫) ಸ್ಪರ್ಧೆಗಳನ್ನು ಏರ್ಪಡಿಸಿ. ಕಾದಂಬರಿಗಳೂ ಇರಲಿ.

೬) ಸಿನಿಮಾಗಳಲ್ಲಿ ಹಾಸ್ಯ, ಕಾದಂಬರಿಗಳಲ್ಲಿ ರಸಮಯ ಸನ್ನಿವೇಶಗಳು, ವಿದೇಶಿ ಹಾಸ್ಯ ಅನುವಾದಿತ ನಗೆ ಬರಹಗಳು – ಇರಲು ಆಗದೇ ?

೭) ಬಜೆಟ್ ಬಗ್ಗೆಯೂ ನನ್ನ ಅರಿವಿದೆ. ಐದು ಚಂದಾದಾರರಿಗೆ ಒಂದು ಉಚಿತ ಚಂದಾ ಡಿಪಾಸಿಟ್ ಮುಂತಾದ ಕ್ರಮಗಳನ್ನು ಅರಸಿ.

೮) ಹಳೆಯ ನಗೆಬರಹಗಳನ್ನು ಪುನಃ ಪ್ರಕಟಿಸಿ.

Good Luck

ಹಾಸ್ಯಪ್ರೇಮಿ

ಪ್ರಿಯರೇ,

ಅಪರಂಜಿಯನ್ನು ಸರ್ವಾಂಗ ಸುಂದರಿಯನ್ನಾಗಿಸಲು ಒಂದೆರಡು ಸಲಹೆ

೧) ರಾಜಕೀಯ ಕಾಲಂ ಆರಂಭಿಸಿ. ರಾಜಕೀಯ ವಿಡಂಬನೆ ಸೇರಿಸಿ.

೨) 'ಅಪರಂಜಿ ಕಿಡಿ' ಸ್ವಲ್ಪ ಕತ್ತಿ ಒದೆತ ಇದ್ದಹಾಗಿರಲಿ. ಈಗ ಸ್ವಲ್ಪ 'SOFT' ಅನ್ನಿಸುತ್ತೆ.

೩) ತಮಾಷೆ ಪ್ರಶ್ನೋತ್ತರ ಮತ್ತು ಓದುಗರ ಪತ್ರಕ್ಕೆ ಅವಕಾಶ ಇರಲಿ. ಹಾಗೆಯೇ ಪುಸ್ತಕ ಪರಿಚಯ, ಲೇಖಕರ ಪರಿಚಯ, ಸೇರಿಸಬಹುದೇನೋ.

ಎಚ್. ಗೋಪಾಲಕೃಷ್ಣ

ಬೆಂಗಳೂರು – 560 003

ಮಾನ್ಯ ಸಂಪಾದಕರಲ್ಲಿ

ಅಪರಂಜಿ ಬಗ್ಗೆ ಹಲವು ಸಲಹೆಗಳನ್ನು ಪರಾಂಬರಿಸಿ

೧) ಪುಟಗಳ ಸಂಖ್ಯೆ ನೂರಕ್ಕಿಂತ ಹೆಚ್ಚಿರಲಿ. ಇದಕ್ಕೆ ಸರಿಯಾದ ಬೆಲೆ.

೨) ಓದುಗರ ಪ್ರತಿಕ್ರಿಯೆಗೆ ಒಂದೆರಡು ಪುಟ ಮೀಸಲಿರಲಿ.

೩) ವ್ಯಂಗ್ಯ ಚಿತ್ರಗಳನ್ನು ಹೆಚ್ಚಿಸಿ.

೪) 'ಅಪರಂಜಿ ಕಿಡಿ' ಅಂಕಣವೇನೋ ಹಿಡಿಸಿದೆ. ಆದರೆ ಇದೂ ಸಹ ಪುಟ ಭಕ್ಷಕವಾಗಿರುವುದು ವಿಷಾದ.

೫) ಅಣಕು ಕವನ ಆಹ್ವಾನಿಸಿರುವಂತೆ, ರಾಜಕೀಯ ವಿಡಂಬನೆಗಳನ್ನು ಆಹ್ವಾನಿಸಿ.

೬) ಕೇವಲ ಕೆಲವರು ಮಾತ್ರ ಲೇಖನಗಳನ್ನು ಬರೆದರೆ, ಪತ್ರಿಕೆಯ ಉದ್ಧಾರ ಕಷ್ಟವಾದಿತು. ಲೇಖಕರ ಆಯ್ಕೆಯಲ್ಲಿ ಮೊಸಲಾತಿ ಬೇಡ. ಬೇರೆ ಬೇರೆ ಪ್ರಾಂತದವರು ಲೇಖನಗಳನ್ನು ಬರೆದರೆ ಓದುಗರ ಬಳಗ ಬೆಳೆಯುತ್ತದೆ.

೭) ಲೇಖನಗಳಿಗೆ ಚಿತ್ರಗಳನ್ನು ಹೊಂದಿಸಿ. ದೃಶ್ಯ ಪ್ರಚೋದನೆ ಹಾಸ್ಯಕ್ಕೆ ಪೂರಕ.

೮) ಪತ್ರಿಕೆಗೆ ಜಾಹಿರಾತು ಏನೇನೂ ಸಾಲದು. ಇತರ ನಿಯತಕಾಲಕಗಳಲ್ಲಿ ಈ ಬಗ್ಗೆ ಜಾಹಿರಾತು ನೀಡಿ.

ಇಂತೀ ವಂದನೆಗಳು

ಎ. ವಿ ನಾಗರಾಜ
ಪುರಪ್ಪಮನೆ – 577 417
ಹೊಸನಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

ನಿಸ್ಸಾಯಕತೆ

Literature is Sex — Shobha De

ವೇಣುಗೋಪಾಲ ಸೊರಬ

'ಬರವಣಿಗೆ ಲೈಂಗಿಕತೆ
ಜೀವನವೂ ಕಾಡುಕತೆ
ಕಾಡಿನಲಿ ಲೈಂಗಿಕತೆ-ಬಲು ಮೋಹಕ !
ನಗರ ಮಧ್ಯದ ಗೋಂಡವನದಲ್ಲಿ ಲಕ ಲಕ !
ಬರವಣಿಗೆಗೂ ಈಗ,
'ಊರು ಹೋಗಿ ಕಾಡು ಬಾ' ಎಂಬ ನಿಸ್ಸಾಯಕತೆ!

Statement about ownership and other particulars about news paper APARANJI to be published in every year in the First issue appearing after the last day of February.

FORM IV

(SEE RULE 8)

1.	Place of Publication	Bangalore
2.	Periodicity	Monthly
3.	Printer's Name	V. R. Nath
	Nationality	Indian
	Address	44, Sampige Road, Malleswaram Bangalore-560 003
4.	Publisher's Name	M. Shivakumar
	Nationality	Indian
	Address	Aparanji Karyalaya 36, 6th Main Road, Malleswaram Bangalore-560 003
5.	Editor's Name	M. Shivakumar
	Nationality	Indian
	Address	Aparanji Karyalaya 36, 6th Main Road, Mallerswaram Bangalore-560 003
6.	Name and Address of Individuals who own the News Paper and Partners/Shareholders holding more than one percent of the total capital	M. Shivakumar Sole Proprietor Aparanji Karyalaya 36, 6th Main Road. Malleswaram Bangalore-560 003

I, M Shivakumar. hereby declare that the Particulars given above are true to the best of my knowledge and belief.

Sd/-
M. SHIVAKUMAR
Publisher

1st March 1994

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36. 6th Main Road, Malleswaram, Bangalore-560 003. Printed at IMPRESSIONS. 404, Sampige Road, Malleswaram, Bangalore-560 003. Editor : M. SHIVAKUMAR.